## ಮಾನ್ಯ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀ ವೈ.ಹೆಚ್.ಹುಚ್ಚಯ್ಯನವರ ಅಧ್ಯಕ್ಷತೆಯಲ್ಲಿ ದಿನಾಂಕ 31-12-2014ರಂದು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯ ನಡವಳಿಗಳು :

**********

**ಹಾಜರಿ : ಹಾಜರಾತಿ ವಹಿಯಲ್ಲಿದ್ದಂತೆ.**

**********

ಸಭೆಯ ಆರಂಭದಲ್ಲಿ ಉಪಕಾರ್ಯದರ್ಶಿ(ಆಡಳಿತ)ಯವರು, ಸಭೆಯ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು,ಲೋಕಸಭಾ ಸದಸ್ಯರು, ವಿಧಾನಸಭಾ ಸದಸ್ಯರು,ವಿಧಾನಪರಿಷತ್ ಸದಸ್ಯರು, ಜಿಲ್ಲಾ ಪಂಚಾಯತ್ ಮಾನ್ಯ ಸದಸ್ಯರುಗಳು, ತಾಲ್ಲೂಕು ಪಂಚಾಯತ್ ಅಧ್ಯಕ್ಷರುಗಳು, ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಜಿಲ್ಲಾ/ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ಪತ್ರಿಕಾ ಮಾಧ್ಯಮದವರುಗಳನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು ಹಾಗೂ ಮಾನ್ಯ ಅಧ್ಯಕ್ಷರು ಸಭೆಯ ಕಾರ್ಯ ಕಲಾಪಗಳನ್ನು ನಡೆಸಿ ಕೊಡಬೇಕೆಂದು ವಿನಂತಿಸಿದರು.

ಮೊದಲಿಗೆ ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರ ಕೋರಿಕೆಯ ಮೇರೆಗೆ, ಮಾನ್ಯ ಅಧ್ಯಕ್ಷರು, ಈ ಸಭೆ 2014ನೇ ವರ್ಷದ ಅಂತಿಮ ಸಭೆಯಾಗಿರುವುದರಿಂದ ಪ್ರಚಲಿತ ಸಂಗತಿಗಳ ಕುರಿತು ತಾಲ್ಲೂಕುವಾರು ವಿಷಯ ಪ್ರಸ್ತಾಪಿಸುವಂತೆ ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, ನೂತನ ವರ್ಷ-2015 ರೈತರಿಗೆ ಆಶಾದಾಯಕವಾಗಿಲ್ಲ. ಮುಂಗಾರು ಮಳೆಯ ಅಭಾವದಿಂದ ಪ್ರಮುಖ ಬೆಳೆಗಳು ವಿಫಲವಾಗಿವೆ. ಮಧುಗಿರಿ ವಿಭಾಗದ ತಾಲ್ಲೂಕುಗಳಲ್ಲಿ ಹೇರಳವಾಗಿ ದ್ವಿದಳಧಾನ್ಯಗಳ ಬಿತ್ತನೆಯಾಗಿತ್ತು; ಐದು ಪ್ರಮುಖ ಬೆಳೆಗಳಾದ ಭತ್ತ, ರಾಗಿ, ತೊಗರಿ, ಸೂರ್ಯಕಾಂತಿ ಮತ್ತು ಶೇಂಗಾ ಬೆಳೆಗಳನ್ನು ವಿಶ್ಲೇಷಣೆ ಮಾಡಿದ ಸಂದರ್ಭದಲ್ಲಿ ಭತ್ತದ ಬೆಳೆಗೆ ಸಂಬಂಧಿಸಿದಂತೆ, 1060 ಹೆ. ವಿಸ್ತೀರ್ಣದ ಗುರಿಗೆ 405ಹೆ. ಪ್ರದೇಶದಲ್ಲಿ ಬಿತ್ತನೆಯಾಗಿದ್ದು, ಈ ಪೈಕಿ ಇಲಾಖೆಯಿಂದ 204.5ಕ್ವಿಂಟಾಲ್ ಬಿತ್ತನೆ ಬೀಜ ವಿತರಿಸಿದ್ದು, ಜೊತೆಗೆ 48.62 ಕ್ವಿಂಟಾಲ್ ಬಿತ್ತನೆ ಬೀಜವನ್ನು ರೈತ ಖಾಸಗಿಯಾಗಿ ಕೊಂಡು ಬಿತ್ತನೆ ಮಾಡಿರುತ್ತಾನೆ. ಈ ಸಂಬಂಧ 16,200ಕ್ವಿ. ಇಳುವರಿ ಬಂದಿದ್ದು, ಮಾರುಕಟ್ಟೆ ದರ ಪ್ರತಿ ಕ್ವಿಂಟಾಲ್ ಭತ್ತದ ಬೆಲೆ ರೂ.1,200/-ರಂತೆ ಒಟ್ಟು ರೂ.1,94,40,000/- ಆಗಿರುತ್ತದೆ. ರಾಗಿ ಬೆಳೆಗೆ ಸಂಬಂಧಿಸಿದಂತೆ, 8900ಹೆ.ಗುರಿಗೆ 10,091 ಹೆ. ಪ್ರದೇಶದಲ್ಲಿ ಬಿತ್ತನೆಯಾಗಿದ್ದು, ಈ ಪೈಕಿ ಇಲಾಖೆಯಿಂದ 232.70ಕ್ವಿ. ಬಿತ್ತನೆ ಬೀಜ ವಿತರಿಸಿದ್ದು, ಜೊತೆಗೆ1,029.37ಕ್ವಿ. ಬಿತ್ತನೆ ಬೀಜವನ್ನು ರೈತ ಖಾಸಗಿಯಾಗಿ ಕೊಂಡು ಬಿತ್ತನೆ ಮಾಡಿರುತ್ತಾನೆ. ರಾಗಿಯ ಒಟ್ಟು ಉತ್ಪಾದನೆ 1,21,092ಕ್ವಿ. ಆಗಿದ್ದು, ಮಾರುಕಟ್ಟೆ ದರ ಪ್ರತಿ ಕ್ವಿ. ರಾಗಿಯ ಬೆಲೆ ರೂ.1,500/-ರಂತೆ ಒಟ್ಟ ರೂ.18,16,38,000/- ಇದ್ದು, ಭತ್ತಕ್ಕಿಂತ ರಾಗಿ ಬೆಳೆ ಜಾಸ್ತಿ ಆಗಬೇಕಾಗಿತ್ತು. ಆದರೆ ಆಗಿಲ್ಲ.ತೊಗರಿ ಬೆಳೆಗೆ ಸಂಬಂಧಿಸಿದಂತೆ, 7,200 ಹೆ. ಗುರಿಗೆ 4167ಹೆ.ಪ್ರದೇಶದಲ್ಲಿ ಬಿತ್ತನೆಯಾಗಿದ್ದು, ಈ ಪೈಕಿ ಇಲಾಖೆಯಿಂದ 348 ಕ್ವಿ.ಬಿತ್ತನೆ ಬೀಜ ವಿತರಿಸಿದ್ದು, ಜೊತೆಗೆ 277.05ಕ್ವಿ. ಬಿತ್ತನೆ ಬೀಜವನ್ನು ರೈತ ಖಾಸಗಿಯಾಗಿ ಕೊಂಡು ಬಿತ್ತನೆ ಮಾಡಿರುತ್ತಾನೆ. ತೊಗರಿಯ ಒಟ್ಟು ಉತ್ಪಾದನೆ 50,004 ಕ್ವಿ. ಆಗಿದ್ದು, ಮಾರುಕಟ್ಟೆ ದರ ಪ್ರತಿ ಕ್ವಿ. ಗೆ ರೂ.3,300/-ರಂತೆ ಒಟ್ಟು ರೂ.16,50,13,200/- ಆಗಬೇಕಾಗಿತ್ತು. ಆದರೆ ಇಲಾಖೆಯಿಂದ ವಿತರಿಸಿರುವ 348ಕ್ವಿಂಟಾಲ್ ಬಿತ್ತನೆ ಬೀಜವನ್ನು ಬಿತ್ತಲಾಗಿದ್ದ 2,320 ಹೆ. ಪ್ರದೇಶದ ತೊಗರಿ ಬೆಳೆ ಕಾಯಿಕಟ್ಟುವಲ್ಲಿ ಸಂಪೂರ್ಣ

ವಿಫಲವಾಗಿರುತ್ತದೆ. ಅಂದಾಜು ಬೆಲೆ ರೂ. 9,18,72,000/- ಮೊತ್ತದ ಬೆಳೆ ನಷ್ಟವಾಗಿರುತ್ತದೆ. ತೊಗರಿ ಬೆಳೆಗೆ ಸಂಬಂಧಿಸಿದಂತೆ ಇಲಾಖೆಯಿಂದ ವಿತರಿಸಿರುವ ಬಿತ್ತನೆ ಬೀಜವು ಅತ್ಯಂತ ಕಳಪೆ ಗುಣಮಟ್ಟದ್ದಾಗಿದ್ದು, ರೈತರು ಖಾಸಗಿಯಾಗಿ ಕೊಂಡಿರುವ ಬಿತ್ತನೆ ಬೀಜ ಉತ್ತಮ ಗುಣಮಟ್ಟದ್ದಾಗಿರುತ್ತದೆ. ಇಲಾಖೆಯವರು ಬಿಜಾಪುರ ಜಿಲ್ಲೆಯ ಹವಾಮಾನಕ್ಕೆ ಹೊಂದಿಕೆಯಾಗುವ ಬಿತ್ತನೆ ಬೀಜವನ್ನು ನಮ್ಮ ಜಿಲ್ಲೆಗೆ ನೀಡಿರುತ್ತಾರೆ. ಬೀಜ ಬಿತ್ತನೆಯಾಗಿ ಹೇರಳವಾಗಿ ಬೆಳೆ ಬೆಳೆದು ಉತ್ಪಾದನೆ ಮಾತ್ರ ಶೂನ್ಯವಾಗಿದೆ. ಈ ನಿಟ್ಟಿನಲ್ಲಿ ಮಧುಗಿರಿ ವಿಭಾಗ ವ್ಯಾಪ್ತಿಯ ಐದೂ ತಾಲ್ಲೂಕುಗಳ ಬೆಳೆ ನಷ್ಟ ಅಂದಾಜು ಮಾಡಿದರೆ ಸುಮಾರು ರೂ.48.00 ಕೋಟಿ ಮೊತ್ತದ ಬೆಳೆ ನಷ್ಟವಾಗಿದ್ದು, ಪ್ರತಿ ತಾಲ್ಲೂಕಿಗೆ ರೂ. 9.00ಕೋಟಿ ಪರಿಹಾರ ನೀಡಬೇಕಾಗುತ್ತದೆ. ಶೇಂಗಾ ಬೆಳೆಗೆ ಸಂಬಂಧಿಸಿದಂತೆ, 49010 ಹೆ. ಗುರಿಗೆ 23,403 ಹೆ. ಬಿತ್ತನೆಯಾಗಿದ್ದು, ಈ ಪೈಕಿ ಇಲಾಖೆಯಿಂದ 3363 ಕ್ವಿ. ಬಿತ್ತನೆ ಬೀಜ ವಿತರಿಸಿದ್ದು, ಜೊತೆಗೆ ರೈತ 31,291.50 ಕ್ವಿ. ಬಿತ್ತನೆ ಬೀಜವನ್ನು ಖಾಸಗಿಯಾಗಿ ಕೊಂಡು ಬಿತ್ತನೆ ಮಾಡಿರುತ್ತಾನೆ. ಒಂದು ಹೆಕ್ಟೇರಿಗೆ ಐದು ಕ್ವಿಂಟಾಲ್ ನಂತೆ ಒಟ್ಟು 1,17,015 ಕ್ವಿಂಟಾಲ್ ಶೇಂಗಾ ಉತ್ಪಾದನೆಯಾಗಿದ್ದು, ಮಾರುಕಟ್ಟೆ ದರ ಪ್ರತಿ ಕ್ವಿಂಟಾಲ್ ಗೆ ರೂ.3,000/-ದಂತೆ ಒಟ್ಟು ರೂ.35,10,45,000/- ವಹಿವಾಟಾಗಿರುತ್ತದೆ. ಸರಾಸರಿ ವಾಡಿಕೆಗಿಂತ ಹೆಚ್ಚಿನ ಮಳೆಯಾಗಿದ್ದು, ಮಧುಗಿರಿ ವಿಭಾಗ ವ್ಯಾಪ್ತಿಯ ಐದೂ ತಾಲ್ಲೂಕುಗಳಲ್ಲಿ ಸಮಪ್ರಮಾಣದಲ್ಲಿ ಬಿತ್ತನೆ, ಉತ್ಪಾದನೆ ಮತ್ತು ವಹಿವಾಟಾಗಿದ್ದರೂ ಸಹ ಬೆಳೆ ಮಾತ್ರ ಶೂನ್ಯವಾಗಿದೆ ಎಂದು ಸಭೆಗೆ ವಿವರಿಸಿದರು.

**(ಕ್ರಮ:-ಜಂಟಿ PÀÈಷಿ ನಿರ್ದೇಶಕರು,ತುಮಕೂರು)**

ಮಾನ್ಯ ಸದಸ್ಯರಾದ ಶ್ರೀ ಕೆಂಚಮಾರಯ್ಯನವರು, ಈರುಳ್ಳಿ ಮತ್ತು ದಾಳಿಂಬೆ ಬೆಳೆಗಳ ಬೆಳೆ ನಷ್ಟ ಪರಿಹಾರದ ಬಗ್ಗೆಯೂ ಕಳೆದ ಸಭೆಯಲ್ಲಿ ಚರ್ಚೆಯಾಗಿದ್ದು, ಇಲಾಖಾ ಕ್ರಮದ ಕುರಿತು ಮಾಹಿತಿ ಒದಗಿಸಬೇಕೆಂದು ಕೋರಿದರು. ಮಾನ್ಯ ಸದಸ್ಯರಾದ ಶ್ರೀಮತಿ ದಾಕ್ಷಾಯಿಣಿಯವರು, ಮೆಕ್ಕೆ ಜೋಳದ ಕಳಪೆ ಬಿತ್ತನೆ ಬೀಜದ ಕುರಿತು ಕ್ರಮವಹಿಸಿರುವ ಬಗ್ಗೆ ಮಾಹಿತಿ ಒದಗಿಸುವಂತೆ ಕೋರಿದರು. ಮಾನ್ಯ ಸದಸ್ಯರಾದ ಶ್ರೀ ಆನಂದರವಿಯವರು, 2013ರ ಸಾಮಾನ್ಯ ಸಭೆಯಲ್ಲಿ ಭತ್ತದ ಬೆಳೆ ನಷ್ಟದ ಕುರಿತು ಚರ್ಚೆಯಾಗಿತ್ತು ಆದರೆ, ಕ್ರಮದ ಕುರಿತು ಸಮರ್ಪಕ ಉತ್ತರ ಸಿಗಲಿಲ್ಲ ಎಂದರು. ಮಾನ್ಯ ಸದಸ್ಯರಾದ ಶ್ರೀ ಟಿ.ಹೆಚ್.ಕೃಷ್ಣಪ್ಪನವರು, ಅನುಪಾಲನಾ ವರದಿಯಲ್ಲಿ ವಿಷಯವಾರು ಸಮರ್ಪಕ ಮಾಹಿತಿ ಒದಗಿಸುವಂತೆ ತಿಳಿಸಿದರು.

**(ಕ್ರಮ:-ಜಂಟಿ PÀÈಷಿ ನಿರ್ದೇಶಕರು,ತುಮಕೂರು)**

ಮಾನ್ಯ ಸಂಸದರು, ಕೃಷಿ ಇಲಾಖೆಯಿಂದ ಕಳಪೆ ಗುಣಮಟ್ಟದ ಬಿತ್ತನೆ ಬೀಜ ವಿತರಿಸಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಸಂಬಂಧಪಟ್ಟವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

**(ಕ್ರಮ:-ಜಂಟಿ PÀÈಷಿ ನಿರ್ದೇಶಕರು,ತುಮಕೂರು)**

ಮಾನ್ಯ ಸದಸ್ಯರಾದ ಶ್ರೀಮತಿ ಜಾನಮ್ಮ ರಾಮಚಂದ್ರಯ್ಯನವರು, ಕಡಲೆಕಾಳು ಮತ್ತು ಕಡಲೆಬೀಜ ಬಿತ್ತನೆ ಮುಗಿದ ನಂತರ ಕೃಷಿ ಇಲಾಖೆಯವರು ಬಿತ್ತನೆ ಬೀಜ ಬಂದಿರುವುದಾಗಿ ತಿಳಿಸಿರುತ್ತಾರೆ. ಬಿತ್ತನೆ ಬೀಜಗಳನ್ನು ರೈತರಿಗೆ ಸಕಾಲದಲ್ಲಿ ತಲುಪಿಸುವ ವ್ಯವಸ್ಥೆಯಾಗಬೇಕು ಎಂದು ಸಭೆಗೆ ತಿಳಿಸಿದರು.

**(ಕ್ರಮ:-ಜಂಟಿ PÀÈಷಿ ನಿರ್ದೇಶಕರು,ತುಮಕೂರು)**

ಮಾನ್ಯ ಅಧ್ಯಕ್ಷರು, ರೈತ ಸಂಪರ್ಕ ಕೇಂದ್ರ ಖಾಸಗಿ ಸಂಸ್ಥೆಯಿಂದ ಸರಬರಾಜಾಗುವ ಬಿತ್ತನೆ ಬೀಜವನ್ನು ಕೃಷಿ ಇಲಾಖೆ ವತಿಯಿಂದ ದೃಢೀಕರಿಸಿರಬೇಕು ಎಂದು ಜಂಟಿ ಕೃಷಿ ನಿರ್ದೇಶಕರಿಗೆ ತಿಳಿಸಿದರು. ಪ್ರತಿಯಾಗಿ ಜಂಟಿ ಕೃಷಿ ನಿರ್ದೇಶಕರು, ಬೀಜ ಬಿತ್ತನೆಗೆ ದಿನಾಂಕ 15-08-2014 ಕಡೆಯ ದಿನವಾಗಿದ್ದು, ತಡವಾಗಿ ಬಿತ್ತನೆ ಮಾಡಿರುವುದರಿಂದ ಬೆಳೆ ಸರಿಯಾಗಿ ಆಗುವುದಿಲ್ಲ, ದೀರ್ಘಾವಧಿ ಮತ್ತು ಅಲ್ಪಾವಧಿ ಬೆಳೆಗಳೆರಡರಲ್ಲೂ ನಷ್ಟವಾಗಿದೆ. ಈ ಕುರಿತು ಪರಿಶೀಲಿಸಿ ಈಗಾಗಲೇ ಸರ್ಕಾರಕ್ಕೆ ವರದಿ ಮಾಡಲಾಗಿದ್ದು, ಕೃಷಿ ವಿಜ್ಞಾನ ಕೇಂದ್ರದಿಂದ ಸಂಶೋಧನಾ ತಂಡವು ಮಧುಗಿರಿ ವಿಭಾಗಕ್ಕೆ ಆಗಮಿಸಿ ಸಂಶೋಧನೆ ನಡೆಸುತ್ತಿದ್ದು, ಸದರಿ ತಂಡದಿಂದ ವರದಿ ಬಂದ ಕೂಡಲೇ ಸದರಿ ವರದಿಯನ್ನಾಧರಿಸಿ ಸಂಬಂಧಪಟ್ಟ ಸರಬರಾಜುದಾರರ ವಿರುದ್ಧ ಅಗತ್ಯ ಕ್ರಮವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು. ಮಾನ್ಯ ಅಧ್ಯಕ್ಷರು, ಇಲಾಖೆಯವರನ್ನು ಕರೆಸಿಕೊಂಡು ಪೂರ್ಣ ಮಾಹಿತಿ ಪಡೆದು ಸಲ್ಲಿಸುವಂತೆ ಜಂಟಿ ಕೃಷಿ ನಿರ್ದೇಶಕರಿಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಆನಂದರವಿಯವರು, ತಾಲ್ಲೂಕು ಮಟ್ಟದಲ್ಲಿ ತೋಟಗಾರಿಕಾ ಅಧಿಕಾರಿಗಳು ಜನಪ್ರತಿನಿಧಿಗಳು ಮತ್ತು ರೈತರಿಗೆ ಸ್ಪಂದಿಸುತ್ತಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಪ್ರತಿಯಾಗಿ ಮಾನ್ಯ ಅಧ್ಯಕ್ಷರು, ಸಂಬಂಧಪಟ್ಟವರಿಗೆ ನೋಟೀಸ್ ಜಾರಿಗೊಳಿಸಿ ಸೂಕ್ತ ತಿಳುವಳಿಕೆ ನೀಡುವಂತೆ ತೋಟಗಾರಿಕಾ ಉಪನಿರ್ದೇಶಕರಿಗೆ ತಿಳಿಸಿದರು.

**(ಕ್ರಮ:-G¥À ನಿರ್ದೇಶಕರು,ತೋಟಗಾರಿಕೆ ಇಲಾಖೆ,ತುಮಕೂರು)**

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, 2013-14ನೇ ಸಾಲಿನ ಬೆಳೆನಷ್ಟ ಪರಿಹಾರದಡಿ (input subsidy) ಶಿರಾ ತಾಲ್ಲೂಕಿಗೆ ಸಂಬಂಧಪಟ್ಟಂತೆ ತೋಟಗಾರಿಕೆ ಇಲಾಖೆಯಿಂದ ಪಾವತಿಯಾಗಬೇಕಾಗಿರುವ ರೂ. 78.50ಲಕ್ಷ ಪರಿಹಾರಧನವನ್ನು ಸಂಬಂಧಪಟ್ಟ ರೈತರಿಗೆ 15 ದಿನಗಳ ಒಳಗಾಗಿ ಪಾವತಿಸಬೇಕೆಂದು ಕಳೆದ ಸಾಮಾನ್ಯ ಸಭೆಯಲ್ಲಿ ತೀರ್ಮಾನವಾಗಿದ್ದರೂ ಈ ವರೆಗೆ ವಿತರಣೆ ಮಾಡಿರುವುದಿಲ್ಲ ಎಂದು ಆಗ್ರಹಿಸಿದರು.

**(ಕ್ರಮ:-G¥À ನಿರ್ದೇಶಕರು,ತೋಟಗಾರಿಕೆ ಇಲಾಖೆ,ತುಮಕೂರು)**

ಉಪ ನಿರ್ದೇಶಕರು ತೋಟಗಾರಿಕಾ ಇಲಾಖೆ ಇವರು, ಬೆಳೆ ನಷ್ಟ ಪರಿಹಾರಕ್ಕೆ ಸಂಬಂಧಿಸಿದಂತೆ, ಸಿರಾ ತಾಲ್ಲೂಕಿಗೆ ರೂ. 78.05ಲಕ್ಷ ಬಿಡುಗಡೆಯಾಗಿದ್ದು, ತತ್ಸಂಬಂಧ ಸಂಬಂಧಪಟ್ಟ ಫಲಾನುಭವಿಗಳ ಪಟ್ಟಿ, IFSC code ಇತ್ಯಾದಿ ವಿವರಗಳನ್ನೊಳಗೊಂಡ Hard copy & Soft copy ಯನ್ನು ಈಗಾಗಲೇ ದಿನಾಂಕ 13-11-2014ರಂದು ಸಂಬಂಧಪಟ್ಟ ತಹಶೀಲ್ದಾರ್ ರವರಿಗೆ ಒದಗಿಸಲಾಗಿದೆ. ಅವರಲ್ಲಿ ವಿಳಂಬವಾಗುತ್ತಿದೆ. ಈ ವರೆಗೆ ರೂ.23.00ಲಕ್ಷ ಮೊತ್ತಕ್ಕೆ RTGS ಆಗಿರುತ್ತದೆ. ಮಧುಗಿರಿ, ಕೊರಟಗೆರೆ, ಶಿರಾ ಮತ್ತು ಪಾವಗಡ ತಾಲ್ಲೂಕಿನ ತಹಶೀಲ್ದಾರ್ ಗಳಿಗೆ ಚೆಕ್ ವಾಪಸ್ ನೀಡಿರುತ್ತಾರೆ ಎಂದು ತಿಳಿಸಿ RTGS ಆಗಿರುವ ಕುರಿತು ತಾಲ್ಲೂಕುವಾರು ಮಾಹಿತಿ ಒದಗಿಸಿದರು.

**(ಕ್ರಮ:-G¥À ನಿರ್ದೇಶಕರು,ತೋಟಗಾರಿಕೆ ಇಲಾಖೆ,ತುಮಕೂರು)**

ಮಾನ್ಯ ಅಧ್ಯಕ್ಷರು, ಕಂದಾಯ ಇಲಾಖೆಯ ವಿಳಂಬ ನೀತಿಯು ಸಹಿಸತಕ್ಕದ್ದಲ್ಲ. ಇದು ರೈತ ವಿರೋಧಿ ಕ್ರಮವಾಗುತ್ತದೆ. ಸರ್ಕಾರದಿಂದ ಹಣ ಬಿಡುಗಡೆಯಾಗಿ ಆಯಾ ತಾಲ್ಲೂಕು ತಹಶೀಲ್ದಾರರ ಖಾತೆಯಲ್ಲಿ ಹಣ ಇದ್ದಾಗ್ಯೂ ರೈತರಿಗೆ ಹಣ ಪಾವತಿಸಲು ಕ್ರಮವಹಿಸಿರುವುದಿಲ್ಲ. ಆದುದರಿಂದ ಕಂದಾಯ ಇಲಾಖೆಯವರು ಕೂಡಲೆ ಹಣ ಪಾವತಿಗೆ ಕ್ರಮವಹಿಸಬೇಕು ಎಂದು ತಿಳಿಸಿದರಲ್ಲದೆ, ಪರಿಹಾರಧನ ಪಾವತಿಗೆ 3-4 ತಿಂಗಳು ವಿಳಂಬವಾಗಲು ಕಾರಣರಾದ ತಹಶೀಲ್ದಾರರಿಗೆ ನೋಟೀಸ್ ನೀಡಿ ಸದರಿ ತಹಶಿಲ್ದಾರರಿಂದ ಸೂಕ್ತ ಸಮಜಾಯಿಷಿ

ಪಡೆದು ಸರ್ಕಾರಕ್ಕೆ ಮತ್ತು ಕೃಷಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ವರದಿ ಮಾಡುವಂತೆ ಪತ್ರ ಮುಖೇನ ಮಾನ್ಯ ಜಿಲ್ಲಾಧಿಕಾರಿಯವರನ್ನು ಕೋರುವಂತೆ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ತಿಳಿಸಿದರು.

**(ಕ್ರಮ:-ಅಪರ ಜಿಲ್ಲಾಧಿಕಾರಿಗಳು,ತುಮಕೂರು ಜಿಲ್ಲೆ,ತುಮಕೂರು)**

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಅಕ್ಟೋಬರ್-ನವೆಂಬರ್ ಮಾಹೆಯ ಅಂತ್ಯಕ್ಕೆ ಕೃಷಿ ಮತ್ತು ತೋಟಗಾರಿಕಾ ಇಲಾಖೆಗಳಿಂದ ಒಟ್ಟು ರೂ. 3.00 ಕೋಟಿ ಪರಿಹಾರ ಪಾವತಿಗೆ ಬಾಕಿ ಇದ್ದು, ಈ ಕುರಿತು ಮಾನ್ಯ ಜಿಲ್ಲಾಧಿಕಾರಿಯವರೊಂದಿಗೆ ಚರ್ಚಿಸಿ, ಖಾತೆ ಹೊಂದಿರುವ ರೈತರಿಗೆ 2-3 ದಿನಗಳಲ್ಲಿ ಪರಿಹಾರಧನ ತಲುಪಿಸುವ ವ್ಯವಸ್ಥೆ ಮಾಡಲಾಗುವುದು ಎಂದು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ರವಿ ಹೆಬ್ಬಾಕ ರವರು, ಘನತ್ಯಾಜ್ಯ ವಿಲೇವಾರಿ ಸಂಬಂಧ ತುಮಕೂರು ತಾಲ್ಲೂಕಿನ ಅಜ್ಜಗೊಂಡನಹಳ್ಳಿಯಲ್ಲಿ ನಡೆದ ದುರ್ಘಟನೆಯ ಕುರಿತು ಸಭೆಯ ಗಮನ ಸೆಳೆದರಲ್ಲದೆ ತೀವ್ರ ವಿಷಾಧ ವ್ಯಕ್ತಪಡಿಸಿದರು. ಸದರಿ ದುರ್ಘಟನೆಯ ಸಂದರ್ಭದಲ್ಲಿ ಅಜ್ಜಗೊಂಡನಹಳ್ಳಿ ಗ್ರಾಮದ ಸುತ್ತ-ಮುತ್ತಲ ಗ್ರಾಮಗಳ ಕೆಲವು ಕಿಡಿಗೇಡಿಗಳು ಪೋಲೀಸರ ಮೇಲೆ ಹಲ್ಲೆ ನಡೆಸಿರುತ್ತಾರೆ, ಆದರೆ ಪೋಲೀಸರು ದೌರ್ಜನ್ಯದಿಂದ ವರ್ತಿಸುತ್ತಿದ್ದು, ಶಾಂತಿಯುತ ಪ್ರತಿಭಟನೆಯಲ್ಲಿ ತೊಡಗಿದ್ದ ನೂರಾರು ಅಮಾಯಕರನ್ನು ಠಾಣೆಗೆ ಕರೆದೊಯ್ದು ಹಿಂಸಿಸಿ ಜೈಲಿಗೆ ಕಳುಹಿಸುತ್ತಿದ್ದಾರೆ. ಇದರಿಂದ ಭಯಭೀತರಾಗಿ ಸದರಿ ಗ್ರಾಮದಲ್ಲಿನ ಯುವಕರು ಮತ್ತು ಮಧ್ಯಮ ವಯಸ್ಕ ಪುರುಷರು ಊರು ಬಿಟ್ಟು ಹೋಗಿದ್ದಾರೆ. ಅಜ್ಜಗೊಂಡನಹಳ್ಳಿಯಲ್ಲಿ 40 ಎಕರೆ ಜಾಗದಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕ ಪ್ರಾರಂಭಿಸಿದ್ದು, ಈ ಬಗ್ಗೆ ಜಿಲ್ಲಾ ಪಂಚಾಯಿತಿಯಿಂದಾಗಲೀ, ಮಾಲಿನ್ಯ ನಿಯಂತ್ರಣ ಮಂಡಳಿಯವರಿಂದಾಗಲೀ ಅಥವಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯವ ರಿಂದಾಗಲೀ ಅನುಮತಿ ಪಡೆದಿರುವುದಿಲ್ಲ. ಅಲ್ಲದೆ, ಅಜ್ಜಗೊಂಡನ ಹಳ್ಳಿ ಅಕ್ಕ-ಪಕ್ಕದ ಗ್ರಾಮವಾದ ಕಟ್ಟಿಗೇನ ಹಳ್ಳಿ ಕಟ್ಟೆಗೆ ಬಿದ್ದ ಮಳೆ ನೀರು ಅಲ್ಲಿಂದ ಹೆಬ್ಬಾಕ ಕೆರೆಗೆ ಬರುತ್ತದೆ, ಹೆಬ್ಬಾಕ ಕೆರೆಯ ನೀರು ಕುಡಿಯಲು ಬಳಕೆಯಾಗುತ್ತಿದೆ. ಇದರಿಂದಾಗಿ, ತ್ಯಾಜ್ಯ ಹಾಕುವುದರಿಂದ ಸದರಿ ಕೆರೆ ನೀರು ಮಲಿನಗೊಂಡು ಬಳಕೆಗೆ ಯೋಗ್ಯವಾಗುವುದಿಲ್ಲ; ಜೊತೆಗೆ, ಪಕ್ಕದಲ್ಲೇ ನಗರ ವೃತ್ತ ರಸ್ತೆಯಿದ್ದು(city ring road), 10 km., ದೂರದಲ್ಲಿ ಕೆ.ಐ.ಎ.ಡಿ.ಬಿ.ಯ ಸಾವಿರಾರು ಎಕರೆ ಭೂಮಿ ಇದೆ. ಆದುದರಿಂದ ಘನತ್ಯಾಜ್ಯ ವಿಲೇವಾರಿಗೆ ಫೀಸಿಬಲಿಟಿ ನೋಡಿ ಜಾಗ ಮಾಡಬೇಕು. ಈ ವಿಚಾರದಲ್ಲಿ ಮಾನ್ಯ ಸಂಸದರು ಮಧ್ಯೆ ಪ್ರವೇಶಿಸಿ ಸೂಕ್ತ ಶಿಫಾರಸು ಮಾಡಬೇಕು ಎಂದು ಕೋರಿದರು. ಈ ಮಾತಿಗೆ ಮಾನ್ಯ ಉಪಾಧ್ಯಕ್ಷರು ಸಹಮತ ವ್ಯಕ್ತಪಡಿಸಿದರು.

**(ಕ್ರಮ:-ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು ಮತ್ತು ಆಯುಕ್ತರು, ನಗರ ಸಭೆ ತುಮಕೂರು)**

ಮಾನ್ಯ ಅಧ್ಯಕ್ಷರು, ನಿಯಮಾನುಸಾರ ತ್ಯಾಜ್ಯ ವಿಲೇವಾರಿಗೆ ಪರಿಣಾಮಕಾರಿ ಯೋಜನೆ ಮಾಡಬೇಕು. ಆದರೆ, ಈ ಸಂಬಂಧ ಜಿಲ್ಲಾಡಳಿತವು, ಪೌರಾಡಳಿತವನ್ನಾಗಲಿ, ಜಿಲ್ಲಾ ಪಂಚಾಯತ್ ನ ಅಧ್ಯಕ್ಷರನ್ನಾಗಲಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರನ್ನಾಗಲಿ ಕೇಳಿಲ್ಲ. ಇಂತಹ ಸೂಕ್ಷ್ಮ ವಿಚಾರಕ್ಕೆ ಅಧಿಕೃತವಾಗಿ ಕ್ರಮವಹಿಸಲು ಕಷ್ಟವಾಗುತ್ತದೆ. ಸಮಸ್ಯೆಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಅಧಿಕಾರದ ದೃಷ್ಟಿಯಿಂದ ಇತ್ಯರ್ಥಪಡಿಸಬೇಕು ಎಂದು ತಿಳಿಸಿದರಲ್ಲದೆ, ಜಿಲ್ಲಾಡಳಿತದ ದುರ್ವತನೆ ಮತ್ತು ಪೋಲೀಸರ ದೌರ್ಜನ್ಯದ ಬಗ್ಗೆ ವಿಷಾಧ ವ್ಯಕ್ತಪಡಿಸಿದರು. ಸಮಸ್ಯೆಯನ್ನು ವೈಜ್ಞಾನಿಕವಾಗಿ ಬಗೆಹರಿಸುವ ಬಗ್ಗೆ ಮತ್ತು ಸಾರ್ವಜನಿಕರಿಗೆ ನೆರವಾಗುವ ಬಗ್ಗೆ ಅಜ್ಜಗೊಂಡನಹಳ್ಳಿ ಮತ್ತು ಸುತ್ತ-ಮುತ್ತಲ ಗ್ರಾಮಗಳ ವ್ಯಾಪ್ತಿಯ ಪ್ರಮುಖರೊಂದಿಗೆ ಸಮಾಲೋಚಿಸಿ ಅಗತ್ಯ ಕ್ರಮವಹಿಸುವುದಾಗಿ ಸಭೆಗೆ ತಿಳಿಸಿದರು. ಪೂರಕವಾಗಿ ಮಾನ್ಯ ಸಂಸದರು, ಈ ಕುರಿತು

ಮಾನ್ಯ ಜಿಲ್ಲಾಧಿಕಾರಿಯವರಿಗೂ ಮತ್ತು ಪೋಲೀಸ್ ವರಿಷ್ಠಾಧಿಕಾರಿಯವರಿಗೂ ತಿಳಿಸಿರುವುದಾಗಿ ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರಬಾಬುರವರು, ಸದರಿ ದುರ್ಘಟನೆಯ ಸಂದರ್ಭದಲ್ಲಿ ಹಲ್ಲೆಯಲ್ಲಿ ಭಾಗಿಯಾಗಿರುವವರ ಪಟ್ಟಿ ನೀಡಿ ಪೋಲೀಸಿನವರು ಅನುಮತಿ ನೀಡಿದರೆ ಖುದ್ದು ಮಾಹಿತಿ ಒದಗಿಸುವುದಾಗಿ ಸಭೆಗೆ ತಿಳಿಸಿದರು. ಮಾನ್ಯ ಅಧ್ಯಕ್ಷರು, ಪ್ರಸ್ತುತ ಪೋಲೀಸ್ ಪಹರೆ ಬೇಕಿಲ್ಲ, ಜನರ ಮೇಲೆ ಪಹರೆ ನಡೆಸಿ ಗಾಬರಿಪಡಿಸುವ ಅಗತ್ಯವಿಲ್ಲ. ಆದುದರಿಂದ ಪೋಲೀಸರನ್ನು ವಾಪಸ್ ಕರೆಸಿಕೊಳ್ಳಿ ಎಂದು ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಯವರಿಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರಬಾಬು ರವರು, ಈ ಪ್ರಕರಣದಿಂದ ಮುಂದಿನ ದಿನಗಳಲ್ಲಿ ಯಾರೊಬ್ಬ ಸಾರ್ವಜನಿಕರು/ರೈತರು ಪ್ರತಿಭಟನೆ ಮಾಡುವಂತೆಯೇ ಇಲ್ಲ ಎನ್ನುವ ನಿಟ್ಟಿನಲ್ಲಿ ಪೋಲೀಸ್ ಇಲಾಖೆ ಉದ್ಧಟತನ ಮೆರೆಯುತ್ತಿದೆ ಎಂದರು.

**(ಕ್ರಮ:- ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು,ತುಮಕೂರು)**

ಮಾನ್ಯ ಸದಸ್ಯರಾದ ಶ್ರೀ ಟಿ.ಹೆಚ್.ಕೃಷ್ಣಪ್ಪನವರು, ನಗರದ ಹಲವಾರು ಖಾಸಗಿ ನರ್ಸಿಂಗ್ ಹೋಂಗಳ ತ್ಯಾಜ್ಯವನ್ನು ಅಜ್ಜಗೊಂಡನಹಳ್ಳಿ ಘಟಕಕ್ಕೆ ವಿಲೆ ಮಾಡುವುದರಿಂದ, ಎಲ್ಲರಿಗೂ ಸಾಕಷ್ಟು ಖಾಯಿಲೆಗಳು ಪ್ರಾರಂಭವಾಗುತ್ತಿವೆ. ಆದುದರಿಂದ ಸುತ್ತ-ಮುತ್ತಲ ಹಳ್ಳಿಗಳಿಗೆ ಜಿಲ್ಲಾ ಆರೋಗ್ಯ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಗ್ರಾಮಸ್ಥರ ಆರೋಗ್ಯದ ತಪಾಸಣೆ ಮಾಡಬೇಕೆಂದು ಸಭೆಗೆ ತಿಳಿಸಿದರು. ಮುಂದುವರಿದು, ನಗರವನ್ನು 4 ವಿಭಾಗ ಮಾಡಿ, ತ್ಯಾಜ್ಯ ವಿಲೇವಾರಿಗೆ ಸರ್ಕಾರ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳ ಮಟ್ಟದಲ್ಲಿ ಚಿಂತನೆ ಮಾಡಿದರೆ ಅನುಕೂಲವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಮುಂದುವರಿದು, ಜಿಲ್ಲೆಯಲ್ಲಿ ಜೂಜು ದಂಧೆ, ಮರಳು ದಂಧೆ, ಬಡ್ಡಿ ದಂಧೆ ಮತ್ತು ಅಬಕಾರಿ ದಂಧೆ ಜಾಸ್ತಿಯಾಗಿದೆ. ಆದುದರಿಂದ, ಈ ಕುರಿತು ನಿಯಂತ್ರಣಕ್ಕೆ ಪೋಲೀಸ್ ಇಲಾಖೆ ಸೂಕ್ತ ಕ್ರಮವಹಿಸಿದಲ್ಲಿ ಗ್ರಾಮೀಣ ಪ್ರದೇಶದ ಜನರು ಆರ್ಥಿಕವಾಗಿ ಸಬಲರಾಗುತ್ತಾರೆ ಎಂದು ಸಭೆಗೆ ತಿಳಿಸಿದರಲ್ಲದೆ, ಈ ಕುರಿತು ಕ್ರಮವಹಿಸಿದ ಬಗ್ಗೆ ಮುಂದಿನ ಸಭೆಯಲ್ಲಿ ಮಾಹಿತಿ ನೀಡಬೇಕು ಎಂದು ಕೋರಿದರು. ಮಾನ್ಯ ಅಧ್ಯಕ್ಷರು, ಮರಳು ನೀತಿಗೆ ಸರ್ಕಾರ ಬೇರೆ ಮಾರ್ಗಸೂಚಿ ರೂಪಿಸಿರುವುದಾಗಿ ಮಾನ್ಯ ಸದಸ್ಯರಿಗೆ ತಿಳಿಸಿದರು.

**(ಕ್ರಮ:-ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು ಮತ್ತು ಆಯುಕ್ತರು, ನಗರ ಸಭೆ ತುಮಕೂರು)**

ಮುಂದುವರಿದು ಮಾನ್ಯ ಸದಸ್ಯರು, ಪ್ರಸಕ್ತ ಸಾಲಿನ ಜಿಲ್ಲಾ ಪಂಚಾಯತ್ ಸದಸ್ಯರ ಕ್ರೀಡಾಕೂಟಕ್ಕೆ ದಿನಾಂಕ ನಿಗಧಿಪಡಿಸುವಂತೆ ಕೋರಿದರು. ಈ ಮೇರೆಗೆ ಮಾನ್ಯ ಅಧ್ಯಕ್ಷರು, 2014-15ನೇ ಸಾಲಿನ ಮಾನ್ಯ ಜಿಲ್ಲಾ ಪಂಚಾಯತ್ ಸದಸ್ಯರ ಕ್ರೀಡಾಕೂಟವನ್ನು ದಿನಾಂಕ 09-01-2015ರಂದು ಬೆಳಗ್ಗೆ ನಡೆಸುವಂತೆ ಕಾರ್ಯಕ್ರಮ ನಿಗಧಿಪಡಿಸಿದರು.

**(ಕ್ರಮ:-ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,ತುಮಕೂರು)**

ಮಾನ್ಯ ಸದಸ್ಯರಾದ ಶ್ರೀಮತಿ ಜಾನಮ್ಮ ರಾಮಚಂದ್ರಯ್ಯನವರು, ಕಳೆದ ಸಾಮಾನ್ಯ ಸಭೆಯ ತೀರ್ಮಾನದ ಮೇರೆಗೆ ಚಿಕ್ಕನಾಯಕನಹಳ್ಳಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ರೂ.35.00ಲಕ್ಷ ಹಣ ದುರುಪಯೋಗವಾಗಿರುವ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಸಿಬ್ಬಂದಿ ಶ್ರೀ ಲೋಕೇಶ್ ಬಾಬುರವರನ್ನು ಸೇವೆಯಿಂದ ಅಮಾನತ್ತುಗೊಳಿಸಿದ್ದು, ಈ ವರೆಗೆ ಅವರನ್ನು ದಸ್ತಗಿರಿ ಮಾಡಿರುವುದಿಲ್ಲ. ಯಾವುದೇ ಪ್ರಕರಣ ದಾಖಲು

ಮಾಡಿರುವುದಿಲ್ಲ ಅಥವಾ ಇಲಾಖಾ ವಿಚಾರಣೆ ಮಾಡಿರುವುದಿಲ್ಲ ಎಂದು ಆಕ್ಷೇಪಿಸಿದರು. ಉತ್ತರವಾಗಿ ಡಿ.ಡಿ.ಪಿ.ಐ., ತುಮಕೂರು ಇವರು, ಶ್ರೀ ಲೋಕೇಶ್ ಬಾಬು ರವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಾಗಿದ್ದು, ದಸ್ತಗಿರಿಗಾಗಿ ಪೋಲೀಸರು ಅವರನ್ನು ಹುಡುಕುತ್ತಿದ್ದಾರೆ. ಸದರಿಯವರ ಪತ್ನಿಯವರನ್ನು ಸೇವೆಯಿಂದ ಅಮಾನತ್ತುಪಡಿಸಲಾಗಿದೆ. ಹಣ ದುರುಪಯೋಗದ ಮಾಹಿತಿ ಪಡೆದು ಉಪ ನಿರ್ದೇಶಕರ ಅಧಿಕಾರ ವ್ಯಾಪ್ತಿಗೆ ಬರುವವರನ್ನು ಸೇವೆಯಿಂದ ಅಮಾನತ್ತು ಮಾಡಲಾಗಿದೆ. ಈ ಬಗ್ಗೆ ಶಿಕ್ಷಣ ಇಲಾಖೆಯ ಆಯುಕ್ತರಿಗೆ ಮಾಹಿತಿ ಒದಗಿಸಲಾಗಿದೆ ಎಂದು ಸಭೆಗೆ ಸ್ಪಷ್ಟಪಡಿಸಿದರು. ಮಾನ್ಯ ಸದಸ್ಯರ ಮಾತಿಗೆ ಪೂರಕವಾಗಿ ಸದಸ್ಯೆ ಶ್ರೀಮತಿ ಲೋಹಿತಾಬಾಯಿಯವರು, ವಿಚಾರಣೆ ಮಾಡಿ ಸಂಬಂಧಪಟ್ಟವರನ್ನು ದಸ್ತಗಿರಿ ಮಾಡಿ ಶಿಸ್ತು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

**( ಕ್ರಮ:ಉಪ ನಿರ್ದೇಶಕರು,ಸಾರ್ವಜನಿಕ ಶಿಕ್ಷಣ ಇಲಾಖೆ,ತುಮಕೂರು )**

ಮಾನ್ಯ ಅಧ್ಯಕ್ಷರು, ಪ್ರಕರಣ ಜರುಗಿ 4-5 ತಿಂಗಳುಗಳಾದರೂ ಈವರೆಗೆ ಸಂಬಂಧಪಟ್ಟವರನ್ನು ದಸ್ತಗಿರಿ ಮಾಡದಿರುವುದಕ್ಕೆ ಹಾಗೂ ಯಾವುದೇ ರೀತಿಯ ಕ್ರಮವಹಿಸದೇ ವಿಳಂಬವಾಗಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸುತ್ತಾ, ಪೋಲೀಸ್ ಇಲಾಖೆಯವರೊಂದಿಗೆ ಸಂಪರ್ಕಿಸಿ, ತುರ್ತಾಗಿ ಕ್ರಮವಹಿಸಿ ಮುಂದೆ ಈ ರೀತಿ ಆಗದಂತೆ ಜಾಗರೂಕರಾಗಿ ಎಚ್ಚರವಹಿಸಬೇಕೆಂದು ಡಿ.ಡಿ.ಪಿ.ಐ., ತುಮಕೂರು ರವರಿಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಪಂಚಾಕ್ಷರಿಯವರು, ಮೇಲಧಿಕಾರಿಗಳು ಏನು ವರದಿ ಕೊಟ್ಟಿದ್ದಾರೆ ಎಂದು ಪ್ರಶ್ನಿಸಿದರು. ಪ್ರತಿಯಾಗಿ ಡಿ.ಡಿ.ಪಿ.ಐ.ತುಮಕೂರು ಇವರು, ವರದಿಯನ್ವಯ ಸದರಿ ಸಿಬ್ಬಂದಿಗೆ ಶೇ.100% ಶಿಕ್ಷೆಯಾಗುತ್ತದೆ ಎಂದು ತಿಳಿಸಿದರು. ಮಾನ್ಯ ಅಧ್ಯಕ್ಷರು, ಸೇವಾ ನಿಯಮಾವಳಿಯನ್ವಯ ಕ್ರಮವಹಿಸಬೇಕಾಗುತ್ತದೆ. ಆರೋಪ ಸಾಬೀತಾಗಿರುವುದರಿಂದ ಶಿಕ್ಷೆ ಆಗುತ್ತದೆ. ಆಯುಕ್ತರಿಗೂ ಪತ್ರ ಬರೆಯಲಾಗಿದೆ. ಉಳಿದ ಸಿಬ್ಬಂದಿ ವಿರುದ್ಧವೂ ಕ್ರಮ ವಹಿಸಲಾಗುತ್ತದೆ ಎಂದು ತಿಳಿಸಿ, ದಸ್ತಗಿರಿಗೆ ವಿಳಂಬವಾಗಿರುವುದಕ್ಕೆ ಆತಂಕ ವ್ಯಕ್ತಪಡಿಸಿ, ನಿಯಮಾವಳಿಗಳ ಪ್ರಕಾರ ಶೀಘ್ರ ದಸ್ತಗಿರಿಗೆ ಕ್ರಮವಹಿಸಬೇಕು ಎಂದು ಡಿ.ಡಿ.ಪಿ.ಐ., ತುಮಕೂರು ಇವರಿಗೆ ತಿಳಿಸಿದರು.

**( ಕ್ರಮ:-ಉಪ ನಿರ್ದೇಶಕರು,ಸಾರ್ವಜನಿಕ ಶಿಕ್ಷಣ ಇಲಾಖೆ,ತುಮಕೂರು )**

ಮಾನ್ಯ ಸದಸ್ಯರಾದ ಶ್ರೀ ಕೆಂಚಮಾರಯ್ಯನವರು, ನಿಯಮಾವಳಿಗಳ ಪ್ರಕಾರ ಲೋಕೇಶ್ ಬಾಬುಗೆ ಶಿಕ್ಷೆ ಆಗುತ್ತದೆ; ಜೊತೆಗೆ ಕ್ಷೇತ್ರ ಶಿಕ್ಷಣಾಧಿಕಾರಿ ಮತ್ತು ಕಛೇರಿ ವ್ಯವಸ್ಥಾಪಕರು ಪರೋಕ್ಷವಾಗಿ ಭಾಗಿಯಾಗಿರುವುದರಿಂದ ಅವರುಗಳನ್ನೂ ಸಹ ಸೇವೆಯಿಂದ ಅಮಾನತ್ತುಗೊಳಿಸಲು ವರದಿ ಮಾಡಬೇಕಾಗಿತ್ತು. ಶ್ರೀ ಲೋಕೇಶ್ ಬಾಬುರವರ ಪತ್ನಿ ಅಮಾಯಕಳಾಗಿದ್ದು, ಈ ಪ್ರಕರಣದಲ್ಲಿ ಆಕೆಯ ಪಾತ್ರ ಏನೂ ಇಲ್ಲ; ಆಕೆ ತಿಪಟೂರಿನಲ್ಲಿ ಬ್ಯಾಂಕ್ ಖಾತೆ ಹೊಂದಿದ್ದು, ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಶಾಲಾ ಶಿಕ್ಷಕಿಯಾಗಿ ಕೆಲಸ ನಿರ್ವಹಿಸುತ್ತಿರುತ್ತಾರೆ. ಎ.ಟಿ.ಎಂ ಕಾರ್ಡ್ ಕೂಡ ಆಕೆಯ ಬಳಿ ಇಲ್ಲ. ಆದುದರಿಂದ ಈ ಬಗ್ಗೆ ಗಮನಹರಿಸಿ ಆಕೆಯ ಅಮಾನತ್ತು ತೆರವುಗೊಳಿಸಿ ಆಕೆಯನ್ನು ಸೇವೆಗೆ ಮರುಸ್ಥಾಪಿಸಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಬೇಕು ಎಂದು ಸಭೆಯ ಗಮನಕ್ಕೆ ತಂದರು. ಪೂರಕವಾಗಿ ಮಾನ್ಯ ಅಧ್ಯಕ್ಷರು, ಲೋಕೇಶ್ ಬಾಬುರವರ ಪತ್ನಿ ಸದರಿ ಪ್ರಕರಣದಲ್ಲಿ ಯಾವುದೇ ತಪ್ಪುಗಳನ್ನು ಮಾಡದೇ ಇರುವುದರಿಂದ ಮೇಲ್ನೋಟಕ್ಕೆ ನಿರ್ದೋಷಿಯಾಗಿ ಕಂಡು ಬಂದಿರುವುದರಿಂದ ಸದರಿ ಶಿಕ್ಷಕಿಯ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ತಕ್ಷಣವೇ ಅಮಾನತ್ತನ್ನು ತೆರವುಗೊಳಿಸಬೇಕೆಂದು ಮಾನ್ಯ ಸದಸ್ಯರಾದ ಶ್ರೀ ಕೆಂಚಮಾರಯ್ಯನವರು ಅಭಿಪ್ರಾಯ ಪಡುತ್ತಾರೆ. ಆದರೆ ಆಕೆಯು ಈ ಪ್ರಕರಣದಲ್ಲಿ ನಿರ್ದೋಷಿಯೇ ಅಥವಾ ದೋಷಿಯೇ ಎಂಬ ಬಗ್ಗೆ ಪರಿಶೀಲಿಸಿ ಮುಂದಿನ ಅಗತ್ಯ ಕ್ರಮ ಜರುಗಿಸಬಹುದೆಂದು ಡಿ.ಡಿ.ಪಿ.ಐ.ರವರಿಗೆ ಸೂಚಿಸಿದರು.

ಡಿ.ಡಿ.ಪಿ.ಐ., ತುಮಕೂರು ಇವರು, ಕಡ್ಡಾಯ ಶಿಕ್ಷಣ(ಆರ್.ಟಿ.ಇ.)ಕುರಿತಾದ ಮಾರ್ಗಸೂಚಿಯನ್ನು ಸಭೆಯಲ್ಲಿ ಓದಿ ವಿವರಿಸಿದರು. ಹಾಗೂ ಹೆಚ್ಚಿನವಿವರಗಳಿಗಾಗಿ ಟೋಲ್ ಫ್ರೀ ದೂರವಾಣಿ ಸಂಖ್ಯೆ 1800 425 11 032(ಜಿಲ್ಲೆ ವ್ಯಾಪ್ತಿ), 1800 425 34 567 (ರಾಜ್ಯ ವ್ಯಾಪ್ತಿ) ಕ್ಕೆ ಕರೆಮಾಡಿ ಮಾಹಿತಿ ಪಡೆಯಬಹುದೆಂದು ತಿಳಿಸಿದರು.

**( ಕ್ರಮ:-ಉಪ ನಿರ್ದೇಶಕರು,ಸಾರ್ವಜನಿಕ ಶಿಕ್ಷಣ ಇಲಾಖೆ,ತುಮಕೂರು )**

ಮಾನ್ಯ ಸದಸ್ಯರಾದ ಶ್ರೀ ರಾಮಚಂದ್ರಯ್ಯನವರು, ಗಳಿಗೇನಹಳ್ಳಿ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯನ್ನು ಸೇವೆಯಿಂದ ಅಮಾನತ್ತುಗೊಳಿಸುವಂತೆ ಕಳೆದ ಸಾಮಾನ್ಯ ಸಭೆಯಲ್ಲಿ ನಿರ್ಣಯವಾಗಿದ್ದರೂ ಸಹ ಈ ವರೆಗೆ ಕ್ರಮವಹಿಸಿರುವುದಿಲ್ಲವೆಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿ, ಕೂಡಲೇ ಕ್ರಮವಹಿಸುವಂತೆ ಆಗ್ರಹಿಸಿದರು. ಈ ಮಾತಿಗೆ ಮಾನ್ಯ ಸದಸ್ಯರುಗಳಾದ ಶ್ರೀ ಟಿ.ಹೆಚ್.ಕೃಷ್ಣಪ್ಪ ಮತ್ತು ಶ್ರೀಮತಿ ಸಾಕಮ್ಮ ನಾಗರಾಜು ರವರುಗಳು ಬೆಂಬಲ ವ್ಯಕ್ತಪಡಿಸಿದರು. ಮಾನ್ಯ ಸದಸ್ಯರಾದ ಶ್ರೀಮತಿ ಶಾರದ ರವರು, ಈ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಮಾಹಿತಿ ಒದಗಿಸಲಾಗಿದ್ದು, ಸರಿಯಾಗಿ ಕೆಲಸ ನಿರ್ವಹಿಸಲು ಸದರಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಅವಕಾಶ ಮಾಡಿಕೊಡಬೇಕೆಂದು ಕೋರಿದರು.

ಮಾನ್ಯ ಅಧ್ಯಕ್ಷರು, ಗಳಿಗೇನ ಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜನ ಆತ ಸರಿಯಾಗಿ ಕೆಲಸಕ್ಕೆ ಬರುವುದಿಲ್ಲ, ನೀರು ವಿತರಿಸುವುದಿಲ್ಲ ಎಂದು ನೀಡಿದ ಮನವಿಯ ಮೇರೆಗೆ, ಸ್ಥಳಕ್ಕೆ ಬೇಟಿ ನೀಡಿ ಪರಿಶೀಲಿಸಿದ್ದು, ಜಿಲ್ಲಾ ಪಂಚಾಯಿತಿಯ ಹಿಂದಿನ ಸಭೆಯ ತಿರ್ಮಾನದಂತೆ ಸದರಿ ಪಿ.ಡಿ.ಓ.ರವರನ್ನು ಅಮಾನತ್ತು ಮಾಡಲು ತಿರ್ಮಾನಿಸಲಾಗಿದ್ದು, ಅದರ ಸ್ಥಿರೀಕರಣಕ್ಕೆ ಮಾನ್ಯ ಸದಸ್ಯರುಗಳಲ್ಲಿ ಬಿನ್ನಾಭಿಪ್ರಾಯ ಉಂಟಾಯಿತು. ಅದರಂತೆ ಪಿ.ಡಿ.ಓ.ರವರನ್ನು ಸೇವೆಯಿಂದ ಅಮಾನತ್ತುಗೊಳಿಸಬೇಕೆಂದು ಒತ್ತಾಯ ಮಾಡಿದರೆ, ಇನ್ನೊಂದು ಗುಂಪು ಆತನನ್ನು ಸೇವೆಯಿಂದ ಅಮಾನತ್ತುಪಡಿಸದೆ ಆತ ಕೆಲಸ ನಿರ್ವಹಿಸಲು ಅವಕಾಶ ಮಾಡಿಕೊಡಬೇಕೆಂದು ಒತ್ತಾಯ ಮಾಡಿತು. ಆದುದರಿಂದ 1-4 ದೋಷಾರೋಪಣಾ ಪಟ್ಟಿ ಸಲ್ಲಿಸಲು ತಿಳಿಸಿದೆ. ಅದರಂತೆ ಪಿ.ಡಿ.ಓ.ಗಳ ಸಕ್ಷಮ ಪ್ರಾಧಿಕಾರದ ಮುಖ್ಯಸ್ಥರಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಆಡಳಿತಾತ್ಮಕ ಕ್ರಮದಂತೆ ದೋಷಾರೋಪಣಾ ಪಟ್ಟಿ ಸಲ್ಲಿಕೆಯಾದ ನಂತರ ಕ್ರಮವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.

**( ಕ್ರಮ:-ಉಪಕಾರ್ಯದರ್ಶಿ(ಅಭಿªÀÈ¢Þ) ಜಿಲ್ಲಾ ಪಂಚಾಯತ್,ತುಮಕೂರು )**

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, ಒಮ್ಮೆ ತೀರ್ಮಾನವಾದ ವಿಷಯವನ್ನು ಪದೇ ಪದೇ ಚರ್ಚೆಗೆ ತರುವುದನ್ನು ನಿಯಂತ್ರಿಸಿ, ಒಮ್ಮೆ ತೀರ್ಮಾನವಾದ ನಂತರ ಸದರಿ ತೀರ್ಮಾನದ ಕುರಿತು ಮಾನ್ಯ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಸೇರಿ ಚರ್ಚಿಸಿ ಇತ್ಯರ್ಥಪಡಿಸುವುದು ಸೂಕ್ತ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಮಾನ್ಯ ಸದಸ್ಯರಾದ ಶ್ರೀ ರಾಮಚಂದ್ರಯ್ಯ ಮತ್ತು ಟಿ.ಹೆಚ್.ಕೃಷ್ಣಪ್ಪರವರುಗಳು ಸದರಿ ಪಿ.ಡಿ.ಓ.ರವರನ್ನು ಅಮಾನತ್ತುಗೊಳಿಸಲೇಬೇಕೆಂದು ಪಟ್ಟುಹಿಡಿದರು. ಪೂರಕವಾಗಿ ಮಾನ್ಯ ಅಧ್ಯಕ್ಷರು, ಸದಸ್ಯೆ ಶ್ರೀಮತಿ ಶಾರದ ಮತ್ತಿತರ ಒಂಭತ್ತು ಗ್ರಾಮ ಪಂಚಾಯತ್ ಸದಸ್ಯರುಗಳು ಸದರಿ ಪಿ.ಡಿ.ಓ. ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವುದಾಗಿ ಮನವಿ ಮಾಡಿರುತ್ತಾರೆ. ಹಾಗೂ 1-4 ಆರೋಪ ಪಟ್ಟಿ ಮಾಡಬಾರದು ಎಂದು ಕೋರಿರುತ್ತಾರೆ, ಆದರೂ 1-4 ಆರೋಪ ಪಟ್ಟಿ ಸಿದ್ಧಪಡಿಸಲು ಈಗಾಗಲೇ ತಿಳಿಸಲಾಗಿದ್ದು, ಅದರಂತೆ ಆರೋಪ ಪಟ್ಟಿ ಜಾರಿ ಮಾಡುತ್ತಿದ್ದಾರೆ ಎಂದು ಸಭೆಗೆ ತಿಳಿಸಿದರು.

**( ಕ್ರಮ:-ಉಪಕಾರ್ಯದರ್ಶಿ(ಅಭಿªÀÈ¢Þ) ಜಿಲ್ಲಾ ಪಂಚಾಯತ್,ತುಮಕೂರು )**

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ಮತ್ತು ಶ್ರೀ ಅರುಣ್ ಕುಮಾರ್ ರವರುಗಳು, ಈ ಕುರಿತು ಒಂದು ಸಮಿತಿ ರಚಿಸಿ ತನಿಖೆ ಮಾಡಿಸುವಂತೆ ಸಲಹೆಯಿತ್ತರು. ಪೂರಕವಾಗಿ ಉಪ ಕಾರ್ಯದರ್ಶಿ(ಅಭಿವೃದ್ಧಿ) ಯವರು, ಸಾಮಾನ್ಯ ಸಭೆಯ ತೀರ್ಮಾನದಂತೆ ಕ್ರಮವಹಿಸುವ ಸಂಬಂಧ ಗಳಿಗೇನಹಳ್ಳಿ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಎಲ್ಲಾ ದಾಖಲಾತಿಗಳನ್ನು ಹಾಗು ದೂರುಗಳನ್ನು ಪರಿಶೀಲಿಸಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಈ ಕಛೇರಿಗೆ ಮೂರು ದಿನಗಳೊಳಗೆ ವರದಿ ಸಲ್ಲಿಸುವಂತೆ ತಿಳಿಸಿ ದಿನಾಂಕ 24-11-2014ರಂದು ತುಮಕೂರು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಪತ್ರ ಬರೆಯಲಾಗಿತ್ತು. ಆದರೆ ಕಾರ್ಯನಿರ್ವಾಹಕ ಅಧಿಕಾರಿಯವರು ನಿಗಧಿತ ಅವಧಿಯಲ್ಲಿ ತನಿಖಾ ವರದಿಯನ್ನು ಸಲ್ಲಿಸಿರುವುದಿಲ್ಲ ಹಾಗೂ ಸದರಿ ಅಧಿಕಾರಿಯವರು ವೈದ್ಯಕೀಯ ರಜೆಯ ಮೇಲೆ ತೆರಳಿದ ಕಾರಣ ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿಯವರು ದಿನಾಂಕ 23-12-2014ರಂದು ತನಿಖಾ ವರದಿ ನೀಡಿದ್ದು, ಸದರಿ ವರದಿಯಲ್ಲಿ "ಶೇಕಡಾ 25% ರ ಹಣ ಬಳಕೆಯಾಗಿರುವುದಿಲ್ಲ ಹಾಗೂ ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷರು ಹಾಗೂ ಕೆಲವು ಗ್ರಾಮ ಪಂಚಾಯಿತಿ ಸದಸ್ಯರು ನೀಡಿದ ದೂರಿನ ಆಧಾರದ ಮೇಲೆ ದಾಖಲೆಗಳನ್ನು ಅವಲೋಕಿಸಿದಾಗ ಗಳಿಗೇನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಯಾವುದೇ ವಿಧವಾದ ಆರ್ಥಿಕ ದುರುಪಯೋಗ ವಾಗಿಲ್ಲವೆಂದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ" ಎಂದು ತಿಳಿಸಿರುತ್ತಾರೆ. ಆದಾಗ್ಯೂ ಸದರಿಯವರ ಕರ್ತವ್ಯ ನಿರ್ಲಕ್ಷ್ಯಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಆದೇಶಿಸಲಾಗಿದೆ. ಅದರಂತೆ ಅನುಬಂಧ 1-4ನ್ನು ಸಿದ್ಧಪಡಿಸಿದ್ದು, ಕಾರ್ಯನಿರ್ವಾಹಕ ಅಧಿಕಾರಿಯವರ ಮೂಲಕ ಆರೋಪ ಪಟ್ಟಿ ಜಾರಿಗೊಳಿಸಿ ಸದರಿ ಪಿ.ಡಿ.ಓ.ವಿರುದ್ಧ ಶಿಸ್ತು ಕ್ರಮವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.

( ಕ್ರಮ:-ಉಪಕಾರ್ಯದರ್ಶಿ(ಅಭಿªÀÈ¢Þ) ಜಿಲ್ಲಾ ಪಂಚಾಯತ್,ತುಮಕೂರು )

ಮಾನ್ಯ ಸದಸ್ಯರಾದ ಶ್ರೀಮತಿ ಶಾರದ ರವರು, ಪಿ.ಡಿ.ಓ.ಗೆ ಅಲ್ಲಿ ಕೆಲಸ ಮಾಡಲು ಅವಕಾಶ ಕೊಡಬೇಕು, ಹಾಗೂ ಕ್ಷೇತ್ರ ವ್ಯಾಪ್ತಿಯಲ್ಲಿ ತಾವು ಕೆಲಸ ಮಾಡಲು ಬಿಡಬೇಕು ಎಂದು ಕೋರಿದರು. ಮಾನ್ಯ ಅಧ್ಯಕ್ಷರು, ಅನುಬಂಧ 1-4ರನ್ವಯ ಈ ತಕ್ಷಣ ಸದರಿ ಪಿ.ಡಿ.ಓ. ವಿರುದ್ಧ ಕ್ರಮವಹಿಸಲು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಅವಕಾಶ ನೀಡಿದೆ ಎಂದು ಸಭೆಗೆ ಸ್ಪಷ್ಟಪಡಿಸಿದರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ವಿಷಯದ ಕುರಿತು ಮಾನ್ಯ ಸದಸ್ಯರು ಕಳೆದ ಸಭೆಯಲ್ಲಿ ಗಮನ ಸೆಳೆದಿದ್ದರು. ಯಾವುದೇ ಒಬ್ಬ ಅಧಿಕಾರಿಯ ಕರ್ತವ್ಯ ಲೋಪವಿದ್ದಲ್ಲಿ ಆತನ/ಆಕೆಯ ವಿರುದ್ಧ ಶಿಸ್ತು ಕ್ರಮ ಅನಿವಾರ್ಯ. ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ನಿರಾಧಾರ ಆರೋಪ, ವೈಯಕ್ತಿಕ ದ್ವೇಷದಿಂದ, ಪಕ್ಷ ಬೇಧದಿಂದ, ದುರುದ್ದೇಶಪೂರ್ವಕವಾಗಿ ಈ ರೀತಿ ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರಾದ ಶ್ರೀಮತಿ ಶಾರದ ರವರು ಮನವಿ ಕೊಟ್ಟಿದ್ದರು. ಮಾನ್ಯ ಸದಸ್ಯರು ಪರಿಶೀಲನೆ ಮಾಡಿ ಚರ್ಚೆ ಮಾಡಿದ್ದಾರೆ. ಅದರಂತೆ ದೂರುದಾರರಿಗೂ ಮನವರಿಕೆ ಮಾಡಿಕೊಟ್ಟಿದ್ದಾರೆ. ಪಿ.ಡಿ.ಓ., ಅಥವಾ ಇತರೆ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕ್ಕೆ ಸಕ್ಷಮ ಪ್ರಾಧಿಕಾರ ಪರಿಶೀಲನೆ ಮಾಡಿ ವಿವೇಚನೆ ಬಳಸಿ ಕ್ರಮವಹಿಸಬೇಕೆಂದು ಸರ್ಕಾರದ ಅಧಿಸೂಚನೆಯಲ್ಲಿ ಪ್ರಕಟವಾಗಿದೆ. ಆದುದರಿಂದ, ಇದು ಗಂಭೀರ ವಿಷಯವಾಗಿರುವುದರಿಂದ ಸಂಬಂಧಪಟ್ಟ ಕಾರ್ಯನಿರ್ವಾಹಕ ಅಧಿಕಾರಿಗೆ ಸೂಚನೆ ನೀಡಿದೆ. ಆದರೆ ಸದರಿ ಕಾರ್ಯ ನಿರ್ವಾಹಕ ಅಧಿಕಾರಿ ರಜೆ ಹೋಗಿದ್ದಕ್ಕೆ ತಂಡ ಕಳುಹಿಸಿ ಸಂಪೂರ್ಣ ತನಿಖೆ ಮಾಡಿಕೊಂಡು ಬಂದಿದ್ದಾರೆ. 321 ಗ್ರಾಮ ಪಂಚಾಯಿಗಳಲ್ಲೂ ಒಂದಲ್ಲ ಒಂದು ಲೋಪ ಕಂಡುಬರುತ್ತದೆ. ಹಣ ದುರುಪಯೋಗ ಪ್ರಕರಣದಲ್ಲಿ ಕ್ರಮ ಜರುಗಿಸುವುದು ಸಕ್ಷಮ

ಪ್ರಾಧಿಕಾರದ ಪ್ರದತ್ತ ಜವಾಬ್ದಾರಿಯಾಗಿರುತ್ತದೆ. ಈ ಪ್ರಕರಣದಲ್ಲಿ ಹಣ ದುರುಪಯೋಗವಾಗಿಲ್ಲ ಎಂದು ವರದಿಯಾಗಿದೆ. ಆದರೆ ಈ ಸದನದ ತೀರ್ಮಾನದ ಮೇರೆಗೆ 1-4 ಆರೋಪ ಪಟ್ಟಿ ಜಾರಿ ಮಾಡಿ ಇಲಾಖಾ ವಿಚಾರಣೆ ನಡೆಸಲು ಆದೇಶ ನೀಡಿದೆ. ಈ ಮಧ್ಯೆ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರು ಮತ್ತು ಮಾನ್ಯ ಅಧ್ಯಕ್ಷರು ಕುಳಿತು ಸಮಾಲೋಚಿಸಿ, ಜಿಲ್ಲಾ ಪಂಚಾಯತ್ ಮಾನ್ಯ ಸದಸ್ಯರುಗಳ ಹಕ್ಕಿಗೆ ಚ್ಯುತಿ ಬಾರದ ರೀತಿ ನ್ಯಾಯಯುತ ತೀರ್ಮಾನ ಕೈಗೊಳ್ಳಲಾಗುವುದು. ಇಂತಹ ಸಂದರ್ಭದಲ್ಲಿ ಪಿ.ಡಿ.ಓ. ಅಥವಾ ಅಧಿಕಾರಿಯ ವೈಯಕ್ತಿಕ ಲೋಪದ ಬಗ್ಗೆ ಸಂಬಂಧಪಟ್ಟ ಶಿಸ್ತು ಪ್ರಾಧಿಕಾರಕ್ಕೆ ವಹಿಸಿದರೆ ಸದನದ ಸಮಯ ಉಳಿತಾಯವಾಗುತ್ತದೆ ಎಂದು ಸಭೆಗೆ ವಿವರಿಸಿದರು.

ಮಾನ್ಯ ಸದಸ್ಯರಾದ ಶ್ರೀ ಟಿ.ಹೆಚ್.ಕೃಷ್ಣಪ್ಪನವರು, ಆ ಪಿ.ಡಿ.ಓ.ರವರನ್ನು ಸದರಿ ಗ್ರಾಮ ಪಂಚಾಯಿತಿಗೆ ಕಳುಹಿಸಬಾರದು ಎಂದು ಸಭೆಯಲ್ಲಿ ಒತ್ತಾಯಿಸಿದರು.

ಮಾನ್ಯ ಸದಸ್ಯರಾದ ಶ್ರೀ ಅರುಣ್ ಕುಮಾರ್ ರವರು, 2011-12ನೇ ಸಾಲಿನ ಸುವರ್ಣ ಗ್ರಾಮೋದಯ ಯೋಜನೆಯಡಿ ಕರ್ನಾಟಕ ಭೂ ಸೇನಾ ನಿಗಮದ ವತಿಯಿಂದ ಬೋರಗೊಂಡನಹಳ್ಳಿ ಎಸ್.ಸಿ.ಕಾಲೋನಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಆ ಪೈಕಿ 140 ಮೀಟರ್ ಕಾಮಗಾರಿ ಈ ವರೆಗೂ ಅಪೂರ್ಣವಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ಮುಂದುವರಿದು, 2011-12ನೇ ಸಾಲಿನಲ್ಲಿ ಕಂಪ್ಯೂಟರ್ ತರಬೇತಿಗಾಗಿ 20 ಅಭ್ಯರ್ಥಿಗಳಿಗೆ ಕ್ರಿಯಾಯೋಜನೆ ಮಾಡಲಾಗಿರುತ್ತದೆ. ಟೈಲರಿಂಗ್ ಮತ್ತು ವಾಹನ ಚಾಲನಾ ತರಬೇತಿಗಾಗಿ ತಲಾ 20 ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಸಂಬಂಧಪಟ್ಟ ತರಬೇತಿ ಸಂಸ್ಥೆಗೆ ಪಟ್ಟಿ ಕಳುಹಿಸಲಾಗಿರುತ್ತದೆ. ಆದರೆ ಯಾರಿಗೂ ತರಬೇತಿ ನೀಡಿರುವುದಿಲ್ಲ. ಈಗ ಪುನ: ಹೊಸದಾಗಿ ಪಟ್ಟಿ ನೀಡಿರುತ್ತಾರೆ. ಪ್ರಸ್ತುತ ಕಿಯೋನಿಕ್ಸ್ ಸಂಸ್ಥೆಯವರು ಕಂಪ್ಯೂಟರ್ ತರಬೇತಿ ನೀಡುತ್ತಿದ್ದು, 20 ಅಭ್ಯರ್ಥಿಗಳ ಪೈಕಿ ಕೇವಲ 8 ಅಭ್ಯರ್ಥಿಗಳು ತರಬೇತಿಗೆ ಹಾಜರಾಗಿರುತ್ತಾರೆ. ಆದರೆ, ಕಿಯೋನಿಕ್ಸ್ ನವರು ಉಳಿದ 12 ಅಭ್ಯರ್ಥಿಗಳಿಗೂ ಹಾಜರಾತಿ ನಮೂದಿಸುತ್ತಿರುತ್ತಾರೆ. ಈ ಕುರಿತು ಕೇಳಲಾಗಿ, ಕಾರ್ಯನಿರ್ವಾಹಕ ಅಧಿಕಾರಿಯವರು ಕಿಯೋನಿಕ್ಸ್ ನವರಿಗೆ ಆದೇಶ ನೀಡಿಲ್ಲ ಎನ್ನುತ್ತಾರೆ ಹಾಗೂ ಕಿಯೋನಿಕ್ಸ್ ನವರು ತರಬೇತಿ ನೀಡಿಲ್ಲ ಎನ್ನುತ್ತಾರೆ. ಆದರೆ, ಟೈಲರಿಂಗ್ ಮತ್ತು ವಾಹನ ಚಾಲನೆ ತರಬೇತಿಯನ್ನು ಸಮೀಕರಿಸಿ ಕಂಪ್ಯೂಟರ್ ತರಬೇತಿ ನೀಡುತ್ತಿದ್ದಾರೆ ಎಂದು ಸಭೆಗೆ ತಿಳಿಸಿದರು. ಉಪ ನಿರ್ದೇಶಕರು ಕರ್ನಾಟಕ ಭೂಸೇನಾ ನಿಗಮ, ತುಮಕೂರು ಇವರು, ಸದರಿ ಬೋರಗೊಂಡನಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು 15 ದಿನಗಳೊಳಗಾಗಿ ಪ್ರಾರಂಭಿಸಿ ದಿನಾಂಕ 31-01-2015ರೊಳಗೆ ಪೂರ್ಣಗೊಳಿಸಿಕೊಡುವುದಾಗಿ ಸಭೆಗೆ ತಿಳಿಸಿದರು.

**(ಕ್ರಮ:ಕಾ.ಪಾ ಇಂ K.R.I.DL ,ತುಮಕೂರು ಮತ್ತು ಕಾ.ನಿ.ಅ.ತಾ.ಪಂ.ಕುಣಿಗಲ್)**

ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಕುಣಿಗಲ್ ಇವರು ಕಂಪ್ಯೂಟರ್ ತರಬೇತಿ ವಿಚಾರ ತನ್ನ ಗಮನಕ್ಕೆ ಬಂದಿಲ್ಲವೆಂದು ಸಭೆಗೆ ತಿಳಿಸಿ, ಪ್ರಕ್ರಿಯೆಯನ್ನು ತಡೆಹಿಡಿಸಿದ್ದು ಹಣ ಪಾವತಿ ಮಾಡಿರುವುದಿಲ್ಲ ಎಂದು ಸಭೆಗೆ ತಿಳಿಸಿದರು. ಮಾನ್ಯ ಅಧ್ಯಕ್ಷರು, ಹಣ ಪಾವತಿ ಮಾಡಿದ್ದರೆ ಸಂಬಂಧಪಟ್ಟವರ ವಿರುದ್ಧ ಕ್ರಮವಹಿಸಬೇಕು ಎಂದು ತಿಳಿಸಿ, ಸದಸ್ಯ ಶ್ರೀ ಅರುಣ್ ಕುಮಾರ್ ರವರ ಸಹಕಾರ ಪಡೆದುಕೊಂಡು ಕಿಯೋನಿಕ್ಸ್ ಸಂಸ್ಥೆಯವರಿಗೆ ಪತ್ರ ಬರೆದು ದಾಖಲಾತಿಗಳನ್ನು ಪಡೆದುಕೊಂಡು ಸತ್ಯಾಂಶ ಪರಿಶೀಲಿಸಿ ಒಂದು ವಾರದೊಳಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ವರದಿ ಸಲ್ಲಿಸಿ ಮಾನ್ಯ ಅಧ್ಯಕ್ಷರಿಗೆ ಮಾಹಿತಿ ಒದಗಿಸುವಂತೆ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ತಿಳಿಸಿದರು.

**(ಕ್ರಮ:-ಕಾ.ನಿ.ಅ.ತಾ.ಪಂ.ಕುಣಿಗಲ್)**

ಮಾನ್ಯ ಸದಸ್ಯರು ಮುಂದುವರಿದು, ತರಬೇತಿ, ಬೀದಿ ದೀಪದ ಕಂಬ, ಸೋಲಾರ್ ಲೈಟ್, ಘನ ತ್ಯಾಜ್ಯ ವಿಲೇವಾರಿ ಇತ್ಯಾದಿ ಕಾರ್ಯಕ್ರಮಗಳಿಗೆ ಹಣ ಮೀಸಲಿರಿಸಿದ್ದು, ಯಾವುದೇ ಕೆಲಸ ಆಗಿಲ್ಲ. ಆದರೆ ಹಣ ಖರ್ಚಾಗಿದೆ ಎಂದು ಲೆಕ್ಕ ತೋರಿಸಿದ್ದಾರೆ ಎಂದು ಸಭೆಗೆ ತಿಳಿಸಿದರು. ಯೋಜನಾ ನಿರ್ದೇಶಕರು, 3ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ ತರಬೇತಿ ನೀಡಲಾಗಿದ್ದು, ಭಾಗಶಃ ಹಣವನ್ನು ಪಾವತಿಸಲಾಗಿದೆ. ನಿಗದಿಪಡಿಸಿದಂತೆ ಕಂಪ್ಯೂಟರ್ ತರಬೇತಿ ಪೂರ್ಣಗೊಂಡಿರುತ್ತದೆ. ಮುಂದೆ ತರಬೇತಿ ನೀಡಲು ಅವಕಾಶ ಇರುವುದಿಲ್ಲ ಮತ್ತು ತರಬೇತಿ ನೀಡಿದರೂ ಹಣ ಪಾವತಿಗೆ ಅವಕಾಶವಿರುವುದಿಲ್ಲ. ಕಾರಣ, ತರಬೇತಿಗಾಗಿ 2011-12ನೇ ಸಾಲಿನಲ್ಲಿ ಒದಗಿಸಲಾಗಿರುವ ಅನುದಾನ ರೂ. 79.00ಲಕ್ಷ ಕಿಯೋನಿಕ್ಸ್ ಸಂಸ್ಥೆಗೆ ಪಾವತಿಸಲು ಬಾಕಿ ಉಳಿದಿರುತ್ತದೆ. ಅನಧಿಕೃತ ತರಬೇತಿಗೆ ಜಿಲ್ಲಾ ಪಂಚಾಯಿತ್ ಜವಾಬ್ದಾರರಲ್ಲ ಎಂದು ಸಭೆಗೆ ತಿಳಿಸಿದರು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಸುವರ್ಣ ಗ್ರಾಮೋದಯ ಯೋಜನೆಯಡಿ ಅನುಷ್ಠಾನಗೊಳಿಸಲಾಗಿರುವ ಸಿವಿಲ್ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ತಿಳಿಸಿದರು. ಮುಂದುವರಿದು, 2011-12ನೇ ಸಾಲಿನಲ್ಲಿ 20 ಅಭ್ಯರ್ಥಿಗಳಿಗೆ ತರಬೇತಿ ಕೊಟ್ಟು 8 ಅಭ್ಯರ್ಥಿಗಳಿಗೆ ಹಾಜರಾತಿ ಇದ್ದು, ಉಳಿದ 12 ಅಭ್ಯರ್ಥಿಗಳಿಗೆ ಹಾಜರಾತಿ ಇಲ್ಲದ ಕುರಿತು ಕಾರ್ಯನಿರ್ವಾಹಕ ಅಧಿಕಾರಿಯವರಿಂದ ಮಾಹಿತಿ ಪಡೆದುಕೊಳ್ಳಿ; ಸೌರ ದೀಪ, ದೀಪದ ಕಂಬ, ಪ್ರಚಾರ ಇತ್ಯಾದಿ ಕಾರ್ಯಕ್ರಮಗಳ ಕುರಿತು ಮಾಹಿತಿ ನಿಖರಪಡಿಸಿಕೊಳ್ಳಿ ಎಂದು ಉಪ ಕಾರ್ಯದರ್ಶಿ(ಅಭಿವೃದ್ಧಿ)ಯವರಿಗೆ ತಿಳಿಸಿದರು. ಮಾನ್ಯ ಅಧ್ಯಕ್ಷರು, ಅಂದಿನ ಅವಧಿಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಯೋಜನಾ ನಿರ್ದೇಶಕರ ವಿರುದ್ಧ ಶಿಸ್ತು ಕ್ರಮಕ್ಕೆ ಸರ್ಕಾರಕ್ಕೆ ಬರೆದು, ಇನ್ನು ಮುಂದೆ ಈ ರೀತಿಯಾಗದಂತೆ ಕ್ರಮವಹಿಸಬೇಕೆಂದು ತಿಳಿಸಿದರು.

**(ಕ್ರಮ: ಯೋಜನಾನಿರ್ದೇಶಕರು.ಜಿ.ಪಂ.ತುಮಕೂರು)**

ಮಾನ್ಯ ಸದಸ್ಯರಾದ ಶ್ರೀ ಕೆಂಚಮಾರಯ್ಯನವರು, 2005-2010ರ ಅವಧಿಯಲ್ಲಿ ನಿರ್ಮಿಸಲಾದ ಶೌಚಾಲಯಗಳಿಗೆ ಸಂಬಂಧಿಸಿದಂತೆ ಕಳಪೆ ಗುಣಮಟ್ಟದ ಸಾಮಗ್ರಿ ಸರಬರಾಜು ಮತ್ತು ಹಣ ದುರುಪಯೋಗದ ಪ್ರಕರಣವನ್ನು ಲೋಕಾಯುಕ್ತಕ್ಕೆ ವಹಿಸಲು ಈ ಹಿಂದೆ ತೀರ್ಮಾನವಾಗಿತ್ತು. ಆದರೆ ಕ್ರಮ ಏನಾಯಿತು ಎಂದು ಗೊತ್ತಾಗಲಿಲ್ಲ.

**(ಕ್ರಮ: ಉಪ ಕಾರ್ಯದರ್ಶಿ(ಅಭಿವೃದ್ಧಿ)ಜಿ.ಪಂ.ತುಮಕೂರು)**

ಮುಂದುವರೆದು, ಈಗ ಶೌಚಾಲಯ ಮುಕ್ತ ಗ್ರಾಮ ಮಾಡಲು ಸಾಕಷ್ಟು ಅನುದಾನ ನೀಡಲು ರಾಜ್ಯ ಸರ್ಕಾರ ವ್ಯವಸ್ಥೆ ಮಾಡಿದೆ. ಜಿಲ್ಲೆಗೆ 59581 ಶೌಚಾಲಯಗಳ ಗುರಿ ನಿಗಧಿಯಾಗಿದ್ದು, ನವೆಂಬರ್ ಅಂತ್ಯಕ್ಕೆ 20906 ಶೌಚಾಲಯಗಳನ್ನು ಪೂರ್ಣಗೊಳಿಸಿದ್ದು, 19357ಕ್ಕೆ ಕಾರ್ಯಾದೇಶ ನೀಡಲಾಗಿರುತ್ತದೆ. ಈ ಸಂಬಂಧ ರೂ.7,53,00,000/- ಅನುದಾನ ಖರ್ಚಾಗಿರುತ್ತದೆ. ಉಳಿದ ಶೌಚಾಲಯಗಳನ್ನು ಕೇವಲ ಮೂರು ತಿಂಗಳಲ್ಲಿ ಪೂರ್ಣಗೊಳಿಸಲು ಸಾಧ್ಯವೇ? ಹಣ ದುರುಪಯೋಗವಾಗಿದ್ದಲ್ಲಿ ಸಂಬಂಧಪಟ್ಟವರ ವಿರುದ್ಧ ಕಠಿಣ ಕ್ರಮವಹಿಸಬೇಕು ಎಂದು ಸಭೆಗೆ ತಿಳಿಸಿದರಲ್ಲದೆ ತಾಲ್ಲೂಕುವಾರು ಆರ್ಥಿಕ ಮತ್ತು ಭೌತಿಕ ವಿವರಗಳನ್ನು ಒದಗಿಸುವಂತೆ ಕೋರಿದರು.

**(ಕ್ರಮ: ಉಪ ಕಾರ್ಯದರ್ಶಿ(ಅಭಿವೃದ್ಧಿ)ಜಿ.ಪಂ.ತುಮಕೂರು)**

ಉಪ ಕಾರ್ಯದರ್ಶಿ(ಅಭಿವೃದ್ಧಿ)ರವರು, 4,95,769 ಜನಸಂಖ್ಯೆಗೆ ಒಟ್ಟು 1,72,498 ವಸತಿ ಶೌಚಾಲಯಗಳನ್ನು ನಿರ್ಮಿಸಲಾಗಿದ್ದು, ಆನ್ಲೈನ್ ಬೇಸ್ 3,23,271 ಶೌಚಾಲಯಗಳನ್ನು ನಿರ್ಮಿಸಬೇಕಾಗಿರುತ್ತದೆ. 2012-13ನೇ ಸಾಲಿನ ಅಂತ್ಯಕ್ಕೆ 87,767 ಶೌಚಾಲಯಗಳನ್ನು, 2013 ರಲ್ಲಿ 26,216 ಶೌಚಾಲಯಗಳನ್ನು, 2013-14ನೇ ಸಾಲಿನಲ್ಲಿ34,663 ಶೌಚಾಲಯಗಳನ್ನು, ಹಾಗೂ 2014-15ನೇ ಸಾಲಿನಲ್ಲಿ ಇಂದಿನವರೆಗೆ 23,852 ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಒಟ್ಟಾರೆ 1,72,498 ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಪ್ರಸಕ್ತ ಗುರಿ 60,000 ಇದ್ದು, 70,000 ಶೌಚಾಲಯಗಳನ್ನು ನಿರ್ಮಿಸಲು ಅವಕಾಶವಿರುತ್ತದೆ.ಮ್ಯಾನ್ಯುಯಲ್ 23,852 ಶೌಚಾಲಯಗಳಿಗೆ ಸುಮಾರು 35,000/- ದಿಂದ 40,000/- ವರ್ಕ್ ಆರ್ಡರ್. ಪಂಚತಂತ್ರ ತಂತ್ರಾಂಶದಲ್ಲಿ ಕಾರ್ಯಾದೇಶ ಜನರೇಟ್ ಮಾಡಬೇಕು. ನಂತರ ಶೌಚಾಲಯ ನಿರ್ಮಾಣ ಮಾಡಬೇಕು. ಶೌಚಾಲಯ ನಿರ್ಮಾಣಕ್ಕೆ ರೂ.12,000/- ಘಟಕ ವೆಚ್ಚ ನಿಗಧಿಪಡಿಸಿದ್ದು, ಎಸ್.ಸಿ.,/ಎಸ್.ಟಿ. ಗಳಿಗೆ ರೂ.15,000/- ಘಟಕ ವೆಚ್ಚ ನಿಗಧಿಪಡಿಸಲಾಗಿದೆ. ಹಣ ಪಾವತಿಸಿದ ನಂತರ ಐ.ಎಂ.ಐ.ಎಸ್. ದಾಖಲಿಸಬೇಕು. 20,000 ಶೌಚಾಲಯಗಳಿಗೆ ಪಂಚತಂತ್ರ ತಂತ್ರಾಂಶದ ಮೂಲಕ ಕಾರ್ಯಾದೇಶ ನೀಡಲಾಗಿದೆ. ಆರ್.ಟಿ.ಜಿ.ಎಸ್.ಮೂಲಕ ಸಂಬಂಧಪಟ್ಟ ಫಲಾನುಭವಿಯ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆಯಾಗುತ್ತದೆ. ದಿನಾಂಕ 01-01-2015ರ ನಂತರ EFMS ಜಾರಿಗೊಳಿಸಲಾಗುತ್ತಿದೆ. ತಂತ್ರಾಂಶ ಅಭಿವೃದ್ಧಿಪಡಿಸಲಾಗಿದೆ. ಹಣದ ಕೊರತೆಯಿಲ್ಲ. ಎಲ್ಲ ತಾಲ್ಲೂಕುಗಳ ಗ್ರಾಮ ಪಂಚಾಯಿತಿಗಳಿಗೆ ಈ ವರೆಗೆ ರೂ.10.00 ಕೋಟಿ ಅನುದಾನ ನೀಡಿದ್ದು, ಈ ಪೈಕಿ ಈವರೆಗೆ ರೂ.8.00ಕೋಟಿ ಖರ್ಚಾಗಿರುತ್ತದೆ. ಪೂರ್ಣ ಹಣದ ಸಂಬಂಧ ಐ.ಎಂ.ಐ.ಎಸ್.ದಾಖಲಿಸಲು ಸರ್ಕಾರ ಒಂದು ವಾರದ ಕಾಲಾವಕಾಶ ನೀಡಿರುತ್ತದೆ. ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಉಪ ವಿಭಾಗ ಮಟ್ಟದ ಸಭೆಗಳನ್ನು ನಡೆಸಿ, ಫಲಾನುಭವಿಗಳಿಗೆ ಕೂಡಲೇ ಹಣ ಪಾವತಿಸುವಂತೆ ಸೂಕ್ತ ಸೂಚನೆ ನೀಡಲಾಗಿದೆ. 52 ಶಾಲೆಗಳಿಗೆ ಶೌಚಾಲಯ ನಿರ್ಮಾಣ ಸಂಬಂಧ ರೂ.18,20,000/-ಅನುದಾನವನ್ನು ಉಪನಿರ್ದೇಶಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಯವರುಗಳ ಮೂಲಕ ಸಂಬಂಧಪಟ್ಟ ಶಾಲಾಭಿವೃದ್ಧಿ ಸಮಿತಿಯವರಿಗೆ ಬಿಡುಗಡೆ ಮಾಡಲಾಗಿದೆ ಹಾಗೂ ಅಂಗನವಾಡಿಗಳಲ್ಲಿ ಶೌಚಾಲಯ ನಿರ್ಮಾಣ ಸಂಬಂಧ ರೂ.21,20,000/- ಅನುದಾನವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಮೂಲಕ ಸಂಬಂಧಪಟ್ಟ ಶಿಶು ಅಭಿವೃದ್ಧಿ ಅಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದ್ದು ಈ ವರೆಗೆ ರೂ.8.10 ಕೋಟಿ ಅನುದಾನ ಖರ್ಚಾಗಿರುತ್ತದೆ. ಉಳಿಕೆ ಅನುದಾನವನ್ನು ತುರ್ತಾಗಿ ಖರ್ಚು ಮಾಡಲಾಗುವುದು ಎಂದು ಸಭೆಗೆ ತಿಳಿಸಿದರಲ್ಲದೆ ತಾಲ್ಲೂಕುವಾರು ಆರ್ಥಿಕ ಮತ್ತು ಭೌತಿಕ ಮಾಹಿತಿಗಳನ್ನು ಸಭೆಗೆ ವಿವರಿಸಿದರು.

ಮಾನ್ಯ ಉಪಾಧ್ಯಕ್ಷರು, ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಸಮೀಕರಣದಡಿ ಪಾವತಿಗೆ ಬಾಕಿ ಇರುವ ಕುರಿತು ಮಾಹಿತಿ ನೀಡುವಂತೆ ಕೋರಿದರು. ಪ್ರತಿಯಾಗಿ ಉಪ ಕಾರ್ಯದರ್ಶಿ(ಅಭಿವೃದ್ಧಿ)ಯವರು, 2014ರ ಅಕ್ಟೋಬರ್ ಮಾಸಾಂತ್ಯದ ಮುನ್ನ ಘಟಕ ವೆಚ್ಚ ರೂ.10,100/- ನಿಗಧಿಯಾಗಿದ್ದು, ಅದರಂತೆ ಎನ್.ಎಂ.ಆರ್.ಜನರೇಟ್ ಆಗಿರುವ ಎಲ್ಲ ಫಲಾನುಭವಿಗಳಿಗೂ ಪೂರ್ಣಪ್ರಮಾಣದ ಹಣ ನೀಡಲಾಗಿದೆ. ಆಂದೋಲನ ರೀತಿಯಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡಿ unskilled labourಗೆ ಹಣ ಪಾವತಿಸಲಾಗಿದೆ. ಐ.ಎಂ.ಐ.ಎಸ್. ದಾಖಲು ಮಾಡದಿರುವ ಕಾರಣ ವೈಯಕ್ತಿಕ ಫಲಾನುಭವಿಗಳಿಗೆ ಹಣ

ನೀಡಲು ಸಾಧ್ಯವಾಗಿರುವುದಿಲ್ಲ. Blocked ಗ್ರಾಮ ಪಂಚಾಯಿತಿಗಳನ್ನೂ ಸೇರಿಸಿ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಶೌಚಾಲಯ ನಿರ್ಮಾಣಕ್ಕೆ ಪ್ರಥಮಾದ್ಯತೆ ನೀಡಲು ಸೂಕ್ತ ಸೂಚನೆ ನೀಡಲಾಗಿದೆ ಎಂದು ಸಭೆಗೆ ತಿಳಿಸಿದರು.

**(ಕ್ರಮ:- ಉಪ ಕಾರ್ಯದರ್ಶಿ(ಅಭಿವೃದ್ಧಿ)ಜಿ.ಪಂ.ತುಮಕೂರು)**

ಕುಣಿಗಲ್ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು, ಪ್ರತಿ ತಾಲ್ಲೂಕಿನ 50-60 ಗ್ರಾಮ ಪಂಚಾಯಿತಿಗಳಲ್ಲಿ ಕಳೆದ 3-4 ವರ್ಷಗಳಿಂದ ಸಮೀಕರಣ ಮೊತ್ತ ಪಾವತಿಗೆ ಬಾಕಿ ಇರುತ್ತದೆ. ಈ ಸಂಬಂಧ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ನಿಖರ ದಾಖಲೆ ಪಡೆದು ತುರ್ತಾಗಿ ಹಣ ಪಾವತಿಸಿದರೆ ಹೊಸ ಶೌಚಾಲಯಗಳ ನಿರ್ಮಾಣಕ್ಕೆ ಜನ ಮುಂದೆ ಬರುತ್ತಾರೆ. ಆದುದರಿಂದ, ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಕರೆಸಿ ದಾಖಲೆ ಪಡೆದು ಪರಿಶೀಲಿಸಿ ಕ್ರಮವಹಿಸಿದರೆ ಅನುಕೂಲವಾಗುತ್ತದೆ ಎಂದು ಸಭೆಗೆ ತಿಳಿಸಿದರು.

**(ಕ್ರಮ:-ಕಾ.ನಿ.ಅ.ತಾ.ಪಂ.ಕುಣಿಗಲ್)**

ಮಾನ್ಯ ಸದಸ್ಯರಾದ ಶ್ರೀ ಕೆಂಚಮಾರಯ್ಯನವರು, ಶೌಚಾಲಯ ನಿರ್ಮಾಣಕ್ಕೆ ಸ್ಥಳಾವಕಾಶ ಹೊಂದಿರುವ ಕುಟುಂಬಗಳೆಷ್ಟಿವೆ ಮತ್ತು ಸ್ಥಳಾವಕಾಶ ಇಲ್ಲದ ಕುಟುಂಬಗಳೆಷ್ಟಿವೆ ಎಂಬ ಕುರಿತು ಸಮೀಕ್ಷೆ(ಸರ್ವೆ) ಮಾಡಿಸಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

**(ಕ್ರಮ:-ಉಪ ಕಾರ್ಯದರ್ಶಿ(ಅಭಿವೃದ್ಧಿ)ಜಿ.ಪಂ.ತುಮಕೂರು)**

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, ಶೌಚಾಲಯ ನಿರ್ಮಾಣದ ಘಟಕ ವೆಚ್ಚಕ್ಕೆ ಸಂಬಂಧಿಸಿದಂತೆ ಪಂಚತಂತ್ರದ ಮೂಲಕ ನಿರ್ಮಲ ಭಾರತ್ ಯೋಜನೆಯಡಿ ರೂ. 12,000/- ನೀಡುವ ಹೊಸ ಆದೇಶ ಚಾಲ್ತಿಯಲ್ಲಿದೆ. ಎನ್.ಆರ್.ಈ.ಜಿ.ಹಣ ಪಾವತಿಸಿದರೆ ಹೊಸ ವೆಚ್ಚಕ್ಕೆ ಅವಕಾಶವಿರುತ್ತದೆ. ಅದರಂತೆ ಮಾರ್ಗಸೂಚಿ ಬದಲಾವಣೆಯಾಗಿದ್ದು,ಪಂಚತಂತ್ರದಲ್ಲಿ ಕಾರ್ಯಾದೇಶ ತೆಗೆಯಲು ಸಮಯ ನಿಗಧಿ ಮಾಡಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಉಪ ಕಾರ್ಯದರ್ಶಿ(ಅಭಿವೃದ್ಧಿ)ಯವರ ವಿವರಗಳನ್ನು ಪುನರುಚ್ಚರಿಸುತ್ತಾ, ಶೌಚಾಲಯ ಮುಕ್ತ ಗ್ರಾಮ ನಿರ್ಮಾಣ ಮಾಡುವುದು ಒಬ್ಬರ ಜವಾಬ್ದಾರಿಯಲ್ಲ. ಪ್ರತಿಯೊಬ್ಬರೂ ಮನಸ್ಸು ಮಾಡಬೇಕು. ಆದುದರಿಂದ, ಶೌಚಾಲಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಟೈಪ್ ಡಿಸೈನ್ ಮಾಡಿ ಎಂ.ಬಿ.ಮಾಡಿದ ನಂತರ ಮನೆಯೆ ಮೊದಲ ಪಾಠಶಾಲೆ ಎಂಬಂತೆ, ಜಿಲ್ಲಾ ಪಂಚಾಯತ್ ನ ಪ್ರತಿಯೊಬ್ಬ ಮಾನ್ಯ ಸದಸ್ಯರೂ ಕೂಡ ತಮ್ಮ-ತಮ್ಮ ಜನ್ಮ ಗ್ರಾಮಗಳಿಂದಲೇ(ನೇಟೀವ್ ವಿಲೇಜ್) ಕಾಮಗಾರಿ ಪ್ರಾರಂಭಿಸಿದರೆ ಉತ್ತಮ ಪ್ರಗತಿ ಸಾಧನೆಯಾಗುತ್ತದೆ. 82 ಗ್ರಾಮ ಪಂಚಾಯಿತಿಗಳಲ್ಲಿ ಐ.ಎಂ.ಐ.ಎಸ್.ಗೆ ಸಿಸ್ಟಂ ಲಾಕ್ ಆಗಿದ್ದು, ಅವುಗಳಿಗೂ ಎನ್.ಆರ್.ಈ.ಜಿ. ಸಮೀಕರಣ ಹಣ ಪಾವತಿ ಮಾಡಿರುವುದಿಲ್ಲ. ಈಗ ಲಾಕ್ ಓಪನ್ ಆಗಿದೆ. ಆದ್ಯತೆ ಮೇಲೆ ಹಣ ಪಾವತಿ ಮಾಡಲು ತಿಳಿಸಲಾಗಿದೆ. ನಿರ್ಮಲ್ ಭಾರತ್ ಯೋಜನೆಯಡಿ ಪೂರ್ಣ ಹಣ ನೀಡಲಾಗಿದ್ದು, ಎನ್.ಆರ್.ಈ.ಜಿ.ಅಡಿ ಇನ್ನೂ ರೂ.30.00ಕೋಟಿ ಹಣ ಸರ್ಕಾರದಿಂದ ಬಾಕಿ ಬರಬೇಕಾಗಿರುತ್ತದೆ. ಇನ್ನು ಮುಂದೆ ಎನ್.ಆರ್.ಈ.ಜಿ.ಲಿಂಕೇಜ್ ಗೆ ಸಂಬಂಧವಿರುವುದಿಲ್ಲ. ಹೊಸ ಆದೇಶದ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ರೂ.15,000/- ಘಟಕವೆಚ್ಚ ನಿಗಧಿಯಾಗಿದ್ದು, ಇತರೆ ವರ್ಗದವರಿಗೆ ರೂ.12,000/-ನಿಗಧಿಯಾಗಿರುತ್ತದೆ (ಈ ಪೈಕಿ ಕೇಂದ್ರಸರ್ಕಾರದ ಪಾಲು ರೂ.9,000/- ಮತ್ತು ರಾಜ್ಯ ಸರ್ಕಾರದ ಪಾಲು ರೂ. 3,000/-). ಎನ್.ಆರ್.ಈ.ಜಿ.ಅಡಿ ಬಾಕಿ

ಬರಬೇಕಾಗಿರುವ ಮೊತ್ತವನ್ನು ಹಂತ ಹಂತವಾಗಿ ಬಿಡುಗಡೆಯಾದಂತೆ ಫಲಾನುಭವಿಗಳ ಖಾತೆಗೆ ಜಮೆಗೊಳಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಟಿ.ಹೆಚ್.ಕೃಷ್ಣಪ್ಪನವರು, ಮಾನ್ಯ ಸದಸ್ಯರುಗಳು ಒಬ್ಬೊಬ್ಬರಾಗಿ ಸಭೆಯಿಂದ ನಿರ್ಗಮಿಸುತ್ತಿದ್ದು, ಕೋರಂ ಇಲ್ಲದಿರುವ ಕಾರಣ ಸಭೆಯನ್ನು ಮುಂದೂಡಬೇಕೆಂದು ಒತ್ತಾಯಿಸಿದರು. ಪ್ರತಿಯಾಗಿ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಸಭೆಯಲ್ಲಿ ಅಧಿಕಾರಿಗಳು ಇಲ್ಲವೆಂದರೆ ಅವರುಗಳಿಗೆ ಕಾರಣ ಕೇಳಿ ನೋಟೀಸ್ ನೀಡಲಾಗುತ್ತದೆ. ನಮ್ಮಲ್ಲೂ ಒಂದು ಶಿಸ್ತು ಇರಬೇಕು. ಜಿಲ್ಲಾ ಪಂಚಾಯತ್ ಮಾನ್ಯ ಸದಸ್ಯರುಗಳು ಇಲ್ಲವೆಂದ ಮೇಲೆ ವಿಷಯಗಳ ಕುರಿತು ಹೇಗೆ ಚರ್ಚೆ ಮಾಡುವುದು? ಎಂದು ಪ್ರಶ್ನಿಸಿದರು.

ಮಾನ್ಯ ಅಧ್ಯಕ್ಷರು, ಶೌಚಾಲಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ಎಲ್ಲ ಜಿಲ್ಲಾ ಪಂಚಾಯತ್ ಮಾನ್ಯ ಸದಸ್ಯರುಗಳು ತಮ್ಮ-ತಮ್ಮ ಕ್ಷೇತ್ರ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿ ಅಧಿಕಾರಿಗಳೊಂದಿಗೆ ಸಹಕರಿಸಿ ಶೌಚಾಲಯ ನಿರ್ಮಾಣ ಪ್ರಗತಿ ಎಷ್ಟಾಗಿದೆ ಇನ್ನೂ ಎಷ್ಟು ಬಾಕಿ ಇದೆ ಹಾಗೂ ಅನುದಾನ ಎಷ್ಟು ಖರ್ಚಾಗಿದೆ ಎಂದು ಪರಿಶೀಲಿಸಬೇಕಲ್ಲವೆ? ಪಿ.ಡಿ.ಓ.ಗಳು, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳು ಮತ್ತು ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳು ಎಲ್ಲರೂ ಸೇರಿ ಆಸಕ್ತಿ ತೋರಿಸಿ ಸಹಕಾರ ನೀಡಿದರೆ ತಾನೆ ಉತ್ತಮ ಪ್ರಗತಿ ಸಾಧ್ಯವಾಗುವುದು? ಎಂದು ಪ್ರಶ್ನಿಸಿ, ಪಿ.ಡಿ.ಓ.ಗಳು ಮತ್ತು ಕಾರ್ಯ ನಿರ್ವಾಹಕ ಅಧಿಕಾರಿಗಳನ್ನು ನೆಚ್ಚಿಕೊಂಡರೆ ಪ್ರಗತಿ ಸಾಧ್ಯವಾಗುವುದಿಲ್ಲ ಎಂದು ಆಪಾದಿಸಿ, ಪ್ರತಿಯೊಂದು ಗ್ರಾಮ ಪಂಚಾಯಿತಿಯ ಪಿ.ಡಿ.ಓ., ಗ್ರಾಮ ಪಂಚಾಯಿತಿ ಕಾರ್ಯದರ್ಶಿಯೂ ಕಛೇರಿ ಚಲನ-ವಲನ ವಹಿಯಲ್ಲಿ ತಮ್ಮ ಚಲನ-ವಲನವನ್ನು ಕಡ್ಡಾಯವಾಗಿ ನಮೂದಿಸಬೇಕು. ಪ್ರತಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಮಾಹೆಯಾನ ಕನಿಷ್ಟ 10 ಗ್ರಾಮ ಪಂಚಾಯಿತಿಗಳಿಗೆ ಕಡ್ಡಾಯವಾಗಿ ಭೇಟಿ ನೀಡಿ ಜಿಲ್ಲಾ ಪಂಚಾಯತ್ ಗೆ ವರದಿ ಸಲ್ಲಿಸಬೇಕು ಎಂದು ಸುತ್ತೋಲೆ ಹೊರಡಿಸಿರುವ ಕುರಿತು ಅತೀವ ಸಂತಸ ವ್ಯಕ್ತ ಪಡಿಸಿದರು. ಮಾನ್ಯ ಸದಸ್ಯರಾದ ಶ್ರೀ ಟಿ.ಹೆಚ್.ಕೃಷ್ಣಪ್ಪನವರು, ಪಿ.ಡಿ.ಓ.ಗಳು ಚುನಾಯಿತ ಪ್ರತಿನಿಧಿಗಳಿಗೆ ಸ್ಪಂದಿಸುವುದಿಲ್ಲವೆಂದು ಆಕ್ಷೇಪಿಸಿದರು.

**( ಕ್ರಮ:- ಜಿಲ್ಲೆಯ ಎಲ್ಲಾ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳು)**

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಶೌಚಾಲಯ ನಿರ್ಮಾಣಕ್ಕೆ ಗ್ರಾಮಗಳ ಆಯ್ಕೆ ಮಾಡಲು ಸರ್ಕಾರ 26-01-2015ರ ದಿನಾಂಕವನ್ನು ನಿಗಧಿಪಡಿಸಿದೆ. ಬಸವೇಗೌಡನ ಪಾಳ್ಯ ಗ್ರಾಮದಲ್ಲಿ ಕೇವಲ 15 ಶೌಚಾಲಯಗಳನ್ನು ನಿರ್ಮಾಣ ಮಾಡಿದರೆ ಅಲ್ಲಿ ಶೇ.100% ಸಾಧನೆಯಾಗುತ್ತದೆ. ಅದರಂತೆ ತಮ್ಮ-ತಮ್ಮ ಜನ್ಮ ಗ್ರಾಮಗಳಲ್ಲಿ ಶೇ.100% ಸಾಧನೆ ಮಾಡಬೇಕು. ಈ ನಿಟ್ಟಿನಲ್ಲಿ ಈವರೆಗೆ ಶೇ.50% ಪ್ರಗತಿಯಾಗಿರು ವುದನ್ನು ಗುರುತಿಸಿ, ಜಾಗ ಇರುವೆಡೆ ಆಸಕ್ತಿವಹಿಸಿ ಕೆಲಸ ಮಾಡಿಸಿದರೆ ತುರ್ತಾಗಿ ಹಣ ನೀಡಲಾಗುವುದು ತಿಳಿಸಿ, ಪ್ರಸಕ್ತ ಮಾಹೆಯಲ್ಲಿ ಅದಕ್ಕಾಗಿ ಶ್ರಮವನ್ನು ವ್ಯಯಿಸುವಂತೆ ಕರೆ ನೀಡಿದರು.

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, ಶೌಚಾಲಯ ನಿರ್ಮಾಣ ಸಂಬಂಧ ಗುರಿ ನಿಗಧಿಪಡಿಸಿ ಜಿಲ್ಲೆಯ ಮರ್ಯಾದೆ ಉಳಿಸುವ ನಿಟ್ಟಿನಲ್ಲಿ ಜಿಲ್ಲಾ ಪಂಚಾಯತ್ ಸದಸ್ಯರವಾರು ವಾರ್ಷಿಕ ಗುರಿ ನಿಗಧಿಪಡಿಸಿ ಹಣ ನೀಡಿದರೆ ತಾವು ಶೌಚಾಲಯ ನಿರ್ಮಾಣ ಮಾಡಿಸುವುದಾಗಿ ಸಭೆಗೆ ಭರವಸೆಯಿತ್ತರು. ಇದಕ್ಕಾಗಿ ಮಾನ್ಯ ಅಧ್ಯಕ್ಷರು ಅವರಿಗೆ ಅಭಿನಂದನೆಗಳನ್ನು ತಿಳಿಸಿದರು. ಸಭೆಯಲ್ಲಿ ಉಪಸ್ಥಿತರಿದ್ದ ಅನೇಕ ಮಾನ್ಯ ಸದಸ್ಯರುಗಳು,

ಹಿಂದಿನ ಸಾಲುಗಳಲ್ಲಿ ನಿರ್ಮಿಸಲಾಗಿರುವ ಶೌಚಾಲಯಗಳ ಹಣ ಕೊಡಿಸಿಕೊಡುವಂತೆ ಕೋರಿದರು. ಮಾನ್ಯ ಸದಸ್ಯರಾದ ಶ್ರೀ ಟಿ.ಹೆಚ್.ಕೃಷ್ಣಪ್ಪನವರು, ಶೌಚಾಲಯ ನಿರ್ಮಾಣದಲ್ಲಿ ಈ ಹಿಂದೆ ನೀಡಲಾಗಿದ್ದ ಬಿಳೆಗಳು ಈಗಾಗಲೇ ಉದುರಿಹೋಗಿವೆ, ಲೋಕಾಯುಕ್ತ ಪ್ರಕರಣ ದಾಖಲಾಗಿದೆ ಇತ್ಯಾದಿ ಸಬೂಬಿನಿಂದ, ಐದು ವರ್ಷಗಳ ಹಿಂದೆ ಕಟ್ಟಿರುವೆಡೆಗೆ ಶೌಚಾಲಯಗಳನ್ನು ಈಗ ಕೊಡಲಾಗುವುದಿಲ್ಲ ಎಂದು ಪಿ.ಡಿ.ಓ.ಗಳು ತಿಳಿಸುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು. ಪ್ರತಿಯಾಗಿ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಅಂತಹ ಗ್ರಾಮವನ್ನು ಬಿಟ್ಟು ಬೇರೆ ಗ್ರಾಮದಲ್ಲಿ ಅನುಷ್ಠಾನ ಮಾಡಿ ಎಂದು ಸಲಹೆಯಿತ್ತರು.

ಮಾನ್ಯ ಸದಸ್ಯರಾದ ಶ್ರೀ ಕೆಂಚಮಾರಯ್ಯನವರು, ಅನುದಾನಿತ ಖಾಸಗಿ ಶಾಲೆಗಳಲ್ಲಿ ಶೌಚಾಲಯ ನಿರ್ಮಾಣಕ್ಕೆ ಮಾರ್ಗಸೂಚಿಯಲ್ಲಿ ಅವಕಾಶವಿದೆಯೇ ಎಂದು ಕೇಳಲಾಗಿ, ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಸರ್ಕಾರಿ ಶಾಲೆಗಳಲ್ಲಿ ಮಾತ್ರ ಶೌಚಾಲಯ ನಿರ್ಮಿಸಬೇಕೆಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ. ಅಂತೆಯೇ, ಅನುದಾನಿತ ಖಾಸಗಿ ಶಾಲೆಗಳಲ್ಲಿ ಶೌಚಾಲಯಗಳು ಇದ್ದಲ್ಲಿ ಮಾತ್ರ ಅಂತಹ ಶಾಲೆಗಳ ಶಿಕ್ಷಕರುಗಳನ್ನು ವೇತನಾನುದಾನಕ್ಕೆ ಒಳಪಡಿಸಲಾಗುವುದು ಎಂದು ಸಭೆಗೆ ತಿಳಿಸಿದರು. ಮುಂದುವರಿದು, ಬಿಳಿ ನೀಡಿದ್ದಕ್ಕೆ ಸ್ವೀಕೃತಿ ಇದ್ದಲ್ಲಿ, ಸಂಬಂಧಪಟ್ಟವರಿಗೆ ಬಿಳಿ ಹಣ ಕಡಿತಗೊಳಿಸಿಕೊಂಡು ಉಳಿಕೆ ಹಣ ಪಾವತಿ ಮಾಡಲಾಗುವುದು ಎಂದು ಸಭೆಗೆ ತಿಳಿಸಿದರು. ಮಾನ್ಯ ಅಧ್ಯಕ್ಷರು, ಈ ಕುರಿತು ಕ್ಷೇತ್ರವಾರು ಒಂದೊಂದು ಗ್ರಾಮಕ್ಕೆ ಭೇಟಿ ನೀಡಲು ದಿನಾಂಕವನ್ನು ನಿಗಧಿಪಡಿಸುವಂತೆ ಉಪ ಕಾರ್ಯದರ್ಶಿ(ಅಭಿವೃದ್ಧಿ)ಯವರಿಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಲಲಿತಾನಿಂಗಪ್ಪನವರು, ಹೆಬ್ಬೂರು ಹೋಬಳಿ ಕಣಕುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಿಸಿಲಹಳ್ಳಿ ಗ್ರಾಮದಲ್ಲಿ ಶೌಚಾಲಯ ನಿರ್ಮಾಣ ಸಂಬಂಧ ಒಬ್ಬ ಫಲಾನುಭವಿಯ ಹೆಸರಿಗೆ ಬಂದ ಅನುದಾನವನ್ನು ಬೇರೊಬ್ಬರು ಪಡೆದುಕೊಂಡಿದ್ದಾರೆ ಎಂದು ಸಭೆಯ ಗಮನಕ್ಕೆ ತಂದರು.

**(ಕ್ರಮ:-ಕಾ.ನಿ.ಅ.ತಾ.ಪಂ.ತುಮಕೂರು)**

ಪಾವಗಡ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮನೆ ಕಟ್ಟಲಿಕ್ಕೇ ಜಾಗವಿಲ್ಲವಾದ್ದರಿಂದ ಸಾರ್ವಜನಿಕ ಶೌಚಾಲಯಕ್ಕೆ ಅವಕಾಶ ಕಲ್ಪಿಸಿಕೊಡಬೇಕು ಎಂದು ತಿಳಿಸಿ, ಶೌಚಾಲಯ ಕಟ್ಟಿರುವ ಫಲಾನುಭವಿಗಳಿಗೆ ಅರ್ಧ ಹಣ ಪಾವತಿಯಾಗಿದ್ದು, ಇನ್ನೂ ಅರ್ಧ ಹಣ ಪಾವತಿಗೆ ಬಾಕಿ ಇರುತ್ತದೆ ಎಂದು ಸಭೆಗೆ ತಿಳಿಸಿದರು. ಮುಂದುವರಿದು, ಫಲಾನುಭವಿಗಳು, ಗ್ರಾಮ ಪಂಚಾಯಿತಿ ಸದಸ್ಯರುಗಳು ಮತ್ತು ಜಿಲ್ಲಾ ಪಂಚಾಯತ್ ಸದಸ್ಯರುಗಳು ಗ್ರಾಮ ಪಂಚಾಯಿತಿ ಕಛೇರಿಗೆ ಬರುತ್ತಾರೆ, ಆದರೆ ಪಿ.ಡಿ.ಓ.ಗಳು ಮತ್ತು ಕಾರ್ಯದರ್ಶಿಗಳು ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಮತ್ತು ಫಲಾನುಭವಿಗಳಿಗೆ ಸಂಪರ್ಕಕ್ಕೆ ಸಿಗುವುದಿಲ್ಲ, ಆದುದರಿಂದ ವಾರಕ್ಕೆ ಎರಡು ದಿನ ಕೇಂದ್ರಸ್ಥಾನದಲ್ಲಿರುವಂತೆ ಅವರುಗಳಿಗೆ ಸೂಕ್ತ ಸೂಚನೆ ನೀಡಬೇಕು. ಕಾರ್ಯನಿರ್ವಾಹಕ ಅಧಿಕಾರಿಯವರೂ ಸಹ ಕೇಂದ್ರಸ್ಥಾನದಲ್ಲಿರುವುದಿಲ್ಲ. ಕೇಂದ್ರಸ್ಥಾನದಲ್ಲಿರುವಂತೆ ಅವರಿಗೂ ಸಹ ಸೂಕ್ತ ಸೂಚನೆ ನೀಡಬೇಕು ಎಂದು ತಿಳಿಸಿದರು. ಮಾನ್ಯ ಅಧ್ಯಕ್ಷರು, ಪಿ.ಡಿ.ಓ.ಗಳು, ಕಾರ್ಯದರ್ಶಿಗಳು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು ಇನ್ನು ಮುಂದೆ ಕೇಂದ್ರಸ್ಥಾನ ದಲ್ಲಿರಬೇಕು, ದೂರುಗಳು ಮರುಕಳಿಸಿದಲ್ಲಿ ಶಿಸ್ತುಕ್ರಮಕ್ಕೆ ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು ಎಂದು ಸಭೆಗೆ ತಿಳಿಸಿದರು.

**(ಕ್ರಮ:-ಕಾ.ನಿ.ಅ.ಪಾವಗಡ ಮತ್ತು ಜಿಲ್ಲೆಯ ಎಲ್ಲಾ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳು)**

ಗುಬ್ಬಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು, ಶೌಚಾಲಯ ನಿರ್ಮಾಣ ಸಂಬಂಧ ಹಳೆಯ ಬಿಲ್ ಗಳನ್ನು ಪಾವತಿ ಮಾಡಬೇಕು. ಗ್ರಾಮ ಪಂಚಾಯಿತಿ ವಸತಿ ಯೋಜನೆಯಡಿ ಕೆಲವು ಫಲಾನುಭವಿಗಳಿಗೆ ಹಣ ಮಂಜೂರಾಗಿರುವುದಿಲ್ಲವಾದ್ದರಿಂದ ಪ್ರಥಮಾಧ್ಯತೆ ಮೇಲೆ ಹಣ ಕೊಡಿಸಿಕೊಡಬೇಕು ಎಂದು ಕೋರಿದರು.

ಮಾನ್ಯ ಸದಸ್ಯರಾದ ಶ್ರೀ ಉಗ್ರಯ್ಯನವರು, ಕುಡಿಯುವ ನೀರು ಯೋಜನೆಯಡಿ ರೂ. 96.00ಲಕ್ಷ ಹಣ ಪಾವತಿಗೆ ಬಾಕಿ ಇರುತ್ತದೆ ಎಂದು ತಿಳಿಸಿ, ಕೂಡಲೇ ಅನುದಾನ ಅಪ್ಲೋಡ್ ಮಾಡಿಸಿಕೊಡಬೇಕೆಂದು ಕೋರಿದರು. ಮಾನ್ಯ ಅಧ್ಯಕ್ಷರು, ಗೊಂದಲ ಮಾಡಿಕೊಳ್ಳದಂತೆ ಮೊದಲು ಸಮಸ್ಯೆಯನ್ನು ಮನಗಂಡು ಪರಿಹಾರವನ್ನು ನಿರ್ಧರಿಸಿ ಹಣ ಬಿಡುಗಡೆಗೆ ಕ್ರಮವಹಿಸಬೇಕೆಂದು ಕುಡಿಯುವ ನೀರು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಗೆ ತಿಳಿಸಿದರು. ಪ್ರತಿಯಾಗಿ ಕುಡಿಯುವ ನೀರು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರು, ಈ ಹಣ ಬಿಡುಗಡೆ ಸಂಬಂಧ ಈಗಾಗಲೇ ಎಲ್ಲಾ ಎ.ಇ.ಇ.ಗಳಿಗೆ ಸೂಕ್ತ ಸೂಚನೆ ನೀಡಲಾಗಿದೆ ಎಂದು ಸಭೆಗೆ ತಿಳಿಸಿದರು.

**(ಕ್ರಮ:- ಕಾ.ಪಾ.ಇಂ. ಮತ್ತು ಪಂ.ರಾ.ಇಂ.ವಿಭಾಗ.ಮಧುಗಿರಿ)**

ಮಾನ್ಯ ಸದಸ್ಯರಾದ ಶ್ರೀಮತಿ ಜಾನಮ್ಮ ರಾಮಚಂದ್ರಯ್ಯನವರು, 2013-14ನೇ ಸಾಲಿನಲ್ಲಿ ಮಂಜೂರಾಗಿರುವ ಸೋಲಾರ್ ದೀಪಗಳಿಗೆ ಕಾರ್ಯಪಾಲಕ ಇಂಜಿನಿಯರ್ ರವರು ಈ ವರೆಗೆ ಅಂದಾಜುಪಟ್ಟಿ ಸಿದ್ಧಪಡಿಸಿಕೊಟ್ಟಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು. ಪ್ರತಿಯಾಗಿ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ತುಮಕೂರು ಇವರು, ಅನುಮೋದಿತ ದರಕ್ಕೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು ದರ ಬದಲಾವಣೆ ಮಾಡಿ ಅಂದಾಜುಪಟ್ಟಿ ಸಲ್ಲಿಸಿದಲ್ಲಿ ಪಂ.ರಾ.ಇಂ.ವಿಭಾಗದಿಂದ ಅನುಮೋದನೆ ನೀಡಲಾಗುವುದು ಎಂದು ಸಭೆಗೆ ತಿಳಿಸಿದರು. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ಉಪವಿಭಾಗ, ಚಿಕ್ಕನಾಯಕನಹಳ್ಳಿ ಇವರು, ಎಸ್.ಪಿ.ಡಿ.ದರದಂತೆ ರೂ.35.00ಲಕ್ಷಕ್ಕೆ ಅಂದಾಜು ಪಟ್ಟಿ ಸಲ್ಲಿಸಲಾಗಿತ್ತು, ಆದರೆ ಅದು ಹಳೆಯ ದರವೆಂದು ತಿಳಿಸಿ ಪರಿಷ್ಕೃತ ದರಕ್ಕೆ ಹೊಸದಾಗಿ ಅಂದಾಜು ಪಟ್ಟಿ ಸಲ್ಲಿಸುವಂತೆ ತಿಳಿಸಿ ಅಂದಾಜುಪಟ್ಟಿ ವಾಪಸ್ ಕಳುಹಿಸಿರುತ್ತಾರೆ ಎಂದು ಸಭೆಗೆ ತಿಳಿಸಿದರು. ಮಾನ್ಯ ಅಧ್ಯಕ್ಷರು, ತುರ್ತಾಗಿ ದರ ಬದಲಾವಣೆ ಮಾಡಿ ಕ್ರಮವಹಿಸುವಂತೆ ಎ.ಇ.ಇ., ಚಿ.ನಾ.ಹಳ್ಳಿ ರವರಿಗೆ ತಿಳಿಸಿದರು.

**(ಕ್ರಮ:-ಕಾ.ಪಾ.ಇಂ, ಪಂ.ರಾ.ಇಂ.ವಿಭಾಗ,ಮಧುಗಿರಿ)**

ಮಾನ್ಯ ಸದಸ್ಯರಾದ ಶ್ರೀಮತಿ ಜಾನಮ್ಮ ರಾಮಚಂದ್ರಯ್ಯನವರು, ಸಿ.ಎಂ.ಜಿ.ಎಸ್.ವೈ.ಯೋಜನೆಯಡಿ ಹಂದನಕೆರೆ ಕ್ಷೇತ್ರ ವ್ಯಾಪ್ತಿಯ ಮಲ್ಲಿಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಳೆದ ಎರಡು ವರ್ಷಗಳಿಂದ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು. ಪ್ರತಿಯಾಗಿ ಕಾರ್ಯಪಾಲಕ ಇಂಜಿನಿಯರ್ ರವರು, ಲೆಕ್ಕ ಶೀರ್ಷಿಕೆ ಬೇರೆಯಾಗಿರಬಹುದು ಅದರಿಂದಾಗಿ ಅರ್ಧಂಬರ್ಧ ಕೆಲಸವಾಗಿದೆ ಎಂದು ತಿಳಿಸಿ, 2015ರ ಮಾರ್ಚ್ ಮಾಸಾಂತ್ಯದೊಳಗಾಗಿ ಪೂರ್ಣಗೊಳಿಸಿಕೊಡುವುದಾಗಿ ಸಭೆಗೆ ಭರವಸೆಯಿತ್ತರು. ಮಾನ್ಯ ಅಧ್ಯಕ್ಷರು, ಸಿ.ಎಂ.ಜಿ.ಎಸ್.ವೈ ಯೋಜನೆಯ ಕ್ರಿಯಾಯೋಜನೆಯನ್ನು ಪರಿಶೀಲಿಸಿ ಸಮಸ್ಯೆ ಇತ್ಯರ್ಥಪಡಿಸುವಂತೆ ಕಾರ್ಯಪಾಲಕ ಇಂಜಿನಿಯರ್ ರವರಿಗೆ ತಿಳಿಸಿದರು.

**(ಕ್ರಮ:-ಕಾ.ಪಾ.ಇಂ, ಪಂ.ರಾ.ಇಂ.ವಿಭಾಗ,ಮಧುಗಿರಿ)**

ಮಾನ್ಯ ಸದಸ್ಯರಾದ ಶ್ರೀಮತಿ ಲಲಿತಾ ನಿಂಗಪ್ಪನವರು, ಹೆಬ್ಬೂರು ಹೋಬಳಿ ಸಿರಿವಾರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗಂಗೋನಹಳ್ಳಿ ಗ್ರಾಮದ ಶಾಲೆಯ ಕುಡಿಯುವ ನೀರು ಕಾಮಗಾರಿಗೆ ಅಂದಾಜುಪಟ್ಟಿ

ಮಾಡಿರುವುದಿಲ್ಲವೆಂದು ಸಭೆಯ ಗಮನಕ್ಕೆ ತರಲಾಗಿ, ಕೂಡಲೇ ಅಂದಾಜುಪಟ್ಟಿ ಸಿದ್ಧಪಡಿಸಿ ಸಲ್ಲಿಸಲಾಗುವುದೆಂದು ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರು ಸಭೆಗೆ ತಿಳಿಸಿದರು.

**(ಕ್ರಮ:-ಕಾ.ಪಾ.ಇಂ ,ಕು.ನೀ ಮತ್ತು ನೈ.ವಿಭಾಗ,ತುಮಕೂರು)**

ಮಾನ್ಯ ಅಧ್ಯಕ್ಷರು, ಎನ್.ಆರ್.ಈ.ಜಿ.ಕಾರ್ಯಕ್ರಮದಡಿ ಶೌಚಾಲಯ ನಿರ್ಮಾಣಕ್ಕೆ ಸಂಬಂಧಿಸಿದಂತೆ, ಗ್ರಾಮ ಪಂಚಾಯಿತಿಗಳಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನೆಯಾಗಿ ಆಕ್ಷೇಪಣೆ ಇಲ್ಲದ ಕಡೆ ಪ್ರಥಮಾಧ್ಯತೆ ಮೇಲೆ ಪೂರ್ಣ ಹಣ ಪಾವತಿಸಬೇಕು. ಗ್ರಾಮ ಪಂಚಾಯಿತಿವಾರು ಸರ್ಕಾರದಿಂದ ಎಷ್ಟು ಹಣ ಬರಬೇಕು ಎಂಬ ಕುರಿತು ಪಟ್ಟಿ ಮಾಡಿ ಹಣ ಬಂದ ಹಾಗೆ ಅವುಗಳನ್ನು ಆಧ್ಯತೆ ಮೇಲೆ ಪಾವತಿಸಬೇಕು. ಸಾಮಾಗ್ರಿ ವೆಚ್ಚ ಹೊರತುಪಡಿಸಿ ಶೌಚಾಲಯ ವೆಚ್ಚ ಸೆಳೆಯಬೇಕು ಎಂದು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಿದರು.

**(ಕ್ರಮ:-ಎಲ್ಲಾ ತಾ.ಪಂ.ಕಾ.ನಿ.ಅ.ಗಳು)**

ನಂತರ ವಿಷಯವಹಿ ಚರ್ಚೆಯನ್ನು ಕೈಗೆತ್ತಿಕೊಂಡರು.

**ವಿಷಯ ಸೂಚಿ 1 :- ಅಂಬೇಡ್ಕರ್/ಜಗಜೀವನ್ ರಾಮ್/ವಾಲ್ಮೀಕಿ ಸಮುದಾಯ ಭವನ ಹಾಗೂ ವಿದ್ಯಾರ್ಥಿನಿಲಯ ಗಳ ಹೊಸ ಕಟ್ಟಡಗಳ ನಿರ್ಮಾಣದ ಪ್ರಗತಿ ಕುರಿತು;**

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರು, 2010-11 ರಿಂದ 2013-14ನೇ ಸಾಲಿನ ವರೆಗೆ ಜಿಲ್ಲೆಗೆ ಒಟ್ಟು 135 ಭವನಗಳು ಮಂಜೂರಾಗಿ (ಅಂಬೇಡ್ಕರ್ ಭವನ-71 ಮತ್ತು ಇತರ ಭವನಗಳು ಒಟ್ಟು 62), ಅನುಷ್ಠಾನವನ್ನು ನಿರ್ಮಿತಿ ಕೇಂದ್ರ ಮತ್ತು ಕರ್ನಾಟಕ ಭೂಸೇನಾ ನಿಗಮದವರಿಗೆ ವಹಿಸಲಾಗಿದ್ದು, ಈ ಪೈಕಿ ಈ ವರೆಗೆ 9 ಕಟ್ಟಡಗಳು ಪೂರ್ಣಗೊಂಡಿದ್ದು, 90 ಕಟ್ಟಡಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ ಹಾಗೂ 40 ಕಟ್ಟಡಗಳಿಗೆ ಜಾಗದ ಅವಶ್ಯಕತೆಯಿರುತ್ತದೆ. 9 ಕಟ್ಟಡಗಳಿಗೆ ಸ್ಥಳ ಬದಲಾವಣೆಗೆ ಕೋರಿ ಇಲಾಖಾ ಆಯುಕ್ತರಿಗೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಪಾವಗಡ ತಾಲ್ಲೂಕಿನಲ್ಲಿ ಏಳು ಭವನಗಳು ಇಲಾಖೆಗೆ ಹಸ್ತಾಂತರವಾಗಿರುತ್ತವೆ ಎಂದು ತಿಳಿಸಿ, ಸಭೆಗೆ ತಾಲ್ಲೂಕುವಾರು ಮಾಹಿತಿಯನ್ನು ವಿವರಿಸಿದರು. ಮತ್ತೆ ಕಳೆದ ವರ್ಷ ಹೊಸದಾಗಿ 24 ಭವನಗಳು ಮಂಜೂರಾಗಿದ್ದು, ನಿರ್ಮಾಣಕ್ಕೆ ಕ್ರಮವಹಿಸಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಉಪಾಧ್ಯಕ್ಷರು, 40 ಕಟ್ಟಡಗಳಿಗೆ ಅವಶ್ಯಕತೆಯಿರುವ ಜಾಗದ ಕುರಿತು ಯಾರ ( ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳು) ಗಮನಕ್ಕೆ ತಂದಿದ್ದೀರಿ? ಎಂದು ಪ್ರಶ್ನಿಸಿದರಲ್ಲದೆ, ಕಾಮಗಾರಿ ಸ್ಥಳ ಬದಲಾವಣೆಗೆ ತುರ್ತು ಅಗತ್ಯ ಕ್ರಮವಹಿಸುವಂತೆ ತಿಳಿಸಲಾಗಿ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರು ತತ್ಸಂಬಂಧ ಕಾರ್ಯನಿರ್ವಾಹಕ ಅಧಿಕಾರಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ತಹಶೀಲ್ದಾರ್ ಗಳಿಗೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು. ಮುಂದುವರಿದು ಮಾನ್ಯ ಉಪಾಧ್ಯಕ್ಷರು, ಮಾನ್ಯ ಶಾಸಕರು, ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಮಾನ್ಯ ಸದಸ್ಯರುಗಳಿಗೂ ಪತ್ರ ಬರೆದು ಕ್ರಮವಹಿಸಿದರೆ ಸಮಸ್ಯೆ ಬಗೆಹರಿಯುತ್ತದೆ ಎಂದು ಸಭೆಗೆ ತಿಳಿಸಿದರು.

**(ಕ್ರಮ:- ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು,ತುಮಕೂರು)**

ಮಾನ್ಯ ಅಧ್ಯಕ್ಷರು, 135 ಕಟ್ಟಡಗಳ ಪೈಕಿ ಕೇವಲ 9 ಕಟ್ಟಡಗಳು ಮಾತ್ರ ಪೂರ್ಣಗೊಂಡಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು.

**(ಕ್ರಮ:-ಯೋಜನಾ ನಿರ್ದೇಶಕರು,ನಿರ್ಮಿತಿ ಕೇಂದ್ರ,ತುಮಕೂರು)**

ಮಾನ್ಯ ಅಧ್ಯಕ್ಷರು, ಕುಣಿಗಲ್ ತಾಲ್ಲೂಕು ಕೆಂಚನಹಳ್ಳಿ ಮತ್ತು ಕಲ್ಲನಾಯಕನಹಳ್ಳಿ ಗ್ರಾಮಗಳಲ್ಲಿ ಅಗತ್ಯ ಜಾಗ ಲಭ್ಯವಿದ್ದು, ಈ ಸಂಬಂಧ ತಮ್ಮನ್ನು ಸಂಪರ್ಕಿಸುವಂತೆ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಯವರಿಗೆ ಸೂಚಿಸುವಂತೆ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರಿಗೆ ತಿಳಿಸಿದರು.

**(ಕ್ರಮ:- ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು,ತುಮಕೂರು)**

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು, ಜಾಗದ ಸಮಸ್ಯೆಯ ಬಗ್ಗೆ ಸ್ಥಾಯಿ ಸಮಿತಿ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ ಸೂಕ್ತ ಸೂಚನೆ ನೀಡಲಾಗಿರುತ್ತದೆ. ಅದರಂತೆ, 2012-13ರ ಕಾಮಗಾರಿ ಗಳನ್ನು 31-03-2015ರೊಳಗೆ ಪೂರ್ಣಗೊಳಿಸಬೇಕು ಎಂದು ತಿಳಿಸಿ, ಅಂಬೇಡ್ಕರ್ ಭವನ ಕಾಮಗಾರಿಯ ಕನಿಷ್ಟ ಪ್ರಗತಿಗೆ ಅಸಮಾಧಾನ ವ್ಯಕ್ತಪಡಿಸಿದರು.

**(ಕ್ರಮ: ನಿರ್ಮಿತಿ ಕೇಂದ್ರ,ತುಮಕೂರು)**

ಮಾನ್ಯ ಅಧ್ಯಕ್ಷರು, ಮುಂದಿನ ವಾರ ಸ್ಥಳ ತನಿಖೆ ಮಾಡುವುದಾಗಿ ತಿಳಿಸಿದರು. 2012-13ನೇ ಸಾಲಿನ ಕಟ್ಟಡಗಳನ್ನು ತುರ್ತಾಗಿ ಪೂರ್ಣಗೊಳಿಸಿ ಶೇ.100%ಪ್ರಗತಿ ಸಾಧಿಸಬೇಕು. ಜಗಜೀವನರಾಮ್ ಭವನ ನಿರ್ಮಾಣಕ್ಕೆ ಏಜೆನ್ಸಿ ನಿಗಧಿಪಡಿಸಿ ಅಂದಾಜುಪಟ್ಟಿಗಳನ್ನು ಸಿದ್ಧಪಡಿಸಿ 2015ರ ಜನವರಿ ಮಾಸಾಂತ್ಯದೊಳಗಾಗಿ ಕಟ್ಟಡ ನಿರ್ಮಾಣ ಪ್ರಾರಂಭಿಸಲು ಅಗತ್ಯ ಕ್ರಮವಹಿಸುವಂತೆ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರಿಗೆ ತಿಳಿಸಿದರು.

**(ಕ್ರಮ:- ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು,ತುಮಕೂರು)**

**ವಿಷಯ ಸೂಚಿ 2 :- ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪ್ರಗತಿ ಕುರಿತು ಚರ್ಚೆ.**

ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಅಧ್ಯಕ್ಷರು, ಈಗಾಗಲೇ 82 ಗ್ರಾಮ ಪಂಚಾಯಿತಿಗಳ ಡ್ಯಾಂಗಲ್ ಗಳು ಪ್ರಾರಂಭವಾಗಿವೆ. ಶೌಚಾಲಯ ನಿರ್ಮಾಣಕ್ಕೆ ಅವಕಾಶ ನೀಡಬೇಕು. ವೈಯಕ್ತಿಕ ಫಲಾನುಭವಿಗೆ ಅವಕಾಶ ನೀಡಬೇಕು. ಸಮಿತಿ ವತಿಯಿಂದ ಸಮುದಾಯ ಕೆಲಸ ಪರಿಶೀಲಿಸಿ, ಸಾಮಾಜಿಕ ಲೆಕ್ಕ ಪರಿಶೋಧನೆಯಾಗಿ, ಆಕ್ಷೇಪಣೆಯಿಲ್ಲದೆ ಎಮ್.ಐ.ಎಸ್.ಆಗಿರುವ, ಪ್ರಕರಣಗಳಿಗೆ ಹಣ ಸೆಳೆಯಬೇಕು. ವ್ಯತ್ಯಾಸವಾದರೆ ಸಂಬಂಧಪಟ್ಟ ಅಧಿಕಾರಿಗಳೇ ನೇರ ಹೊಣೆಗಾರರಾಗುತ್ತೀರಿ ಎಂದು ಸಭೆಗೆ ತಿಳಿಸಿದರು.

**(ಕ್ರಮ:-ಉಪ ಕಾರ್ಯದರ್ಶಿ(ಅಭಿವೃದ್ಧಿ)ಜಿ.ಪಂ.ತುಮಕೂರು)**

**ವಿಷಯ ಸೂಚಿ 3 : ವಿವಿಧ ನಿಗಮಗಳ ಸಾಲ ಯೋಜನೆ, ಗಂಗಾ ಕಲ್ಯಾಣ ಯೋಜನೆಯ ಅನುಷ್ಠಾನ ಕುರಿತು ಚರ್ಚೆ;**

ವಿಷಯದ ಕುರಿತು ಮಾನ್ಯ ಅಧ್ಯಕ್ಷರು, ಮಾನ್ಯ ಶಾಸಕರುಗಳಿಂದ ತಕ್ಷಣ ಪಟ್ಟಿ ಪಡೆದು 2015ರ ಮಾರ್ಚ್ ಮಾಸಾಂತ್ಯದೊಳಗೆ ಪ್ರಗತಿ ಸಾಧಿಸಬೇಕು ಎಂದು ತಿಳಿಸಿದರಲ್ಲದೆ, ವ್ಯತ್ಯಾಸವಾದರೆ ನಾಲ್ಕೂ ನಿಗಮಗಳ ಜಿಲ್ಲಾ ವ್ಯವಸ್ಥಾಪಕರುಗಳೇ ನೇರ ಹೊಣೆಗಾರರಾಗುತ್ತೀರಿ ಎಂದು ತಿಳಿಸಿದರು.

**(ಕ್ರಮ:- DM,SC/ST/Minority/Backward Class ಮತ್ತು ಪ.ವ.ಕಲ್ಯಾಣಾಧಿಕಾರಿಗಳು,ತುಮಕೂರು)**

**ವಿಷಯ ಸೂಚಿ 4 :- ಜಿಲ್ಲಾ ಪಂಚಾಯತ್ ವಿವಿಧ ಸ್ಥಾಯಿ ಸಮಿತಿ/ಸಭೆಗಳ ನಿರ್ಣಯಗಳನ್ನು ಅನುಮೋದಿಸುವ ಬಗ್ಗೆ.**

a) **ದಿನಾಂಕ:09-12-2014ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು.**

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಕಾರ್ಯದರ್ಶಿಯವರು, ದಿನಾಂಕ:09-12-2014ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು. ಮಾನ್ಯ ಸದಸ್ಯರಾದ ಶ್ರೀ ಕೆಂಚಮಾರಯ್ಯನವರು, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಕಾಮಗಾರಿಗಳು

ಕಾಲಮಿತಿಯಲ್ಲಿ ಅನುಷ್ಠಾನವಾಗಲೇಬೇಕು ಎಂದು ಒತ್ತಾಯಿಸಿದರು. ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**b) ದಿನಾಂಕ: 17-12-2014ರಂದು ನಡೆದ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು.**

ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿಯ ಕಾರ್ಯದರ್ಶಿಯವರು, ದಿನಾಂಕ: 17-12-2014ರಂದು ನಡೆದ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು. ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**c) ದಿನಾಂಕ: 24-12-2014ರಂದು ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು.**

ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿಯ ಕಾರ್ಯದರ್ಶಿಯವರು, ದಿನಾಂಕ: 24-12-2014ರಂದು ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು. ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತ ದಿಂದ ಅನುಮೋದಿಸಿತು.

**d) ದಿನಾಂಕ: 26-12-2014ರಂದು ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು.**

ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿಯ ಕಾರ್ಯದರ್ಶಿಯವರು, ದಿನಾಂಕ 26-12-2014 ರಂದು ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು. ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**e) ದಿನಾಂಕ: 30-10-2014ರಂದು ನಡೆದ ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯ ನಡವಳಿಯ ಅನುಪಾಲನಾ ವರದಿ ಕುರಿತು;**

ದಿನಾಂಕ 30-10-2014ರಂದು ನಡೆದ ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯ ನಡವಳಿಗಳನ್ವಯ ಕ್ರಮವಹಿಸಲಾದ ಕುರಿತು ಅನುಪಾಲನಾವರದಿಯನ್ನು ಸಭೆಯು ಕೂಲಂಕುಷವಾಗಿ ಪರಿಶೀಲಿಸಿ ಅಂಗೀಕರಿಸಿತು.

**f) ದಿನಾಂಕ: 26-11-2014ರಂದು ನಡೆದ ಜಿಲ್ಲಾ ಪಂಚಾಯತ್ ವಿಶೇಷ ಸಾಮಾನ್ಯ ಸಭೆಯ ನಡವಳಿಯ ಅನುಪಾಲನಾ ವರದಿ ಕುರಿತು;**

ದಿನಾಂಕ 26-11-2014ರಂದು ನಡೆದ ಜಿಲ್ಲಾ ಪಂಚಾಯತ್ ವಿಶೇಷ ಸಾಮಾನ್ಯ ಸಭೆಯ ನಡವಳಿಗಳನ್ವಯ ಕ್ರಮವಹಿಸಲಾದ ಕುರಿತು ಅನುಪಾಲನಾವರದಿಯನ್ನು ಸಭೆಯು ಕೂಲಂಕುಷವಾಗಿ ಪರಿಶೀಲಿಸಿ ಅಂಗೀಕರಿಸಿತು.

ವಿಷಯ ಸೂಚಿ 5 : ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು ;

1. ಮಾನ್ಯ ಸದಸ್ಯರಾದ ಶ್ರೀ ಕೆಂಚಮಾರಯ್ಯನವರು, ಜಿಲ್ಲಾ ಪಂಚಾಯತ್ ಕೇಂದ್ರ ಕಛೇರಿಯ ಎರಡನೆ ಅಂತಸ್ತಿನ ಕಟ್ಟಡ ಪ್ರಾರಂಭೋತ್ಸವಕ್ಕೆ ದಿನಾಂಕ ನಿಗಧಿಪಡಿಸುವಂತೆ ಕೋರಿದ ಮೇರೆಗೆ ಮಾನ್ಯ ಅಧ್ಯಕ್ಷರು, ತುರ್ತಾಗಿ ಕಾಮಗಾರಿ ಪೂರ್ಣಗೊಳಿಸಿ, ದಿನಾಂಕ 25-01-2015ಕ್ಕೆ ಕಟ್ಟಡ ಸಿಂಗಾರ ಮಾಡಿ, ದಿನಾಂಕ 26-01-2015ರಂದು ಪ್ರಾರಂಭೋತ್ಸವ ಮಾಡಲು ಕಾರ್ಯಕ್ರಮ ನಿಗಧಿಪಡಿಸಿದರು.

2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಚುನಾಯಿತ ಸದಸ್ಯರುಗಳು ತಮ್ಮ ಆಸ್ತಿ ಘೋಷಣೆಯನ್ನು ಸಲ್ಲಿಸುವ ಸಂಬಂಧ, ಸರ್ಕಾರದ ತಿದ್ದುಪಡಿ ಅಧಿಸೂಚನೆಯ ಅಂಶಗಳ ಕುರಿತು ಸಭೆಗೆ ತಿಳಿಸುತ್ತಾ, ಸಂಬಂಧಪಟ್ಟ ಎಲ್ಲರಿಗೂ ಈಗಾಗಲೇ ನಮೂನೆ-1ನ್ನು ನೀಡಲಾಗಿದ್ದು, ಅದರಂತೆ, 2014ನೇ ವರ್ಷದ ಅಂದರೆ ದಿನಾಂಕ 01-01-2014 ರಿಂದ 31-12-2014ರ ಅವಧಿಯಲ್ಲಿ ಮಾನ್ಯ ಸದಸ್ಯರುಗಳು ತಮ್ಮ ಮತ್ತು ತಮ್ಮ ಕುಟುಂಬ ಸದಸ್ಯರು ಹೊಂದಿರುವ ಆಸ್ತಿ ವಿವರಗಳನ್ನು ಸದರಿ ನಮೂನೆಯಲ್ಲಿ ಭರ್ತಿ ಮಾಡಿ, ನೇರವಾಗಿ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, 2ನೇ ಮಹಡಿ, ಬಿ.ಎಂ.ಟಿ.ಸಿ.ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿ ನಗರ, ಬೆಂಗಳೂರು-27 ಇವರಿಗೆ, ದಿನಾಂಕ:31-01-2015 ರೊಳಗೆ ತಪ್ಪದೆ ಕಳುಹಿಸಬೇಕೆಂದು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲ ಮಾನ್ಯ ಸದಸ್ಯರುಗಳಿಗೆ ತಿಳಿಸಿದರು.

3. ಮಾನ್ಯ ಸದಸ್ಯರಾದ ಶ್ರೀಮತಿ ಲಲಿತನಿಂಗಪ್ಪರವರು, ಕಣಕುಪ್ಪೆ ಪಿ.ಡಿ.ಒ.ರವರು ಪ್ರತಿ ನಿತ್ಯ ಬೆಂಗಳೂರಿನಿಂದ ಗ್ರಾಮ ಪಂಚಾಯತಿ ಕಛೇರಿಗೆ ಬರುತ್ತಿದ್ದಾರೆ. ಸಮಯಕ್ಕೆ ಸರಿಯಾಗಿ ಕಛೇರಿಗೆ ಬರುವುದಿಲ್ಲ, ಪ್ರತಿನಿತ್ಯ ಬರುವುದಿಲ್ಲ, ಜನರಿಗೆ ಸ್ಪಂದಿಸುತ್ತಿಲ್ಲ, ಈ ಹಿಂದೆ ಈ ಬಗ್ಗೆ ಪ್ರಸ್ತಾಪಿಸಿದ್ದರೂ ಪ್ರಯೋಜನವಾಗಿಲ್ಲ ಎಂದು ಸಭೆಯ ಗಮನಕ್ಕೆ ತಂದರು.

(ಕ್ರಮ:-ಕಾ.ನಿ.ಅ.ತಾ.ಪಂ.ತುಮಕೂರು)

4. **ಮಾನ್ಯ ಅಧ್ಯಕ್ಷರು, ಮುಂದಿನ ಸಾಮಾನ್ಯ ಸಭೆಯನ್ನು ದಿನಾಂಕ : 02-03-2015ರಂದು ನಡೆಸಲು ನಿಗದಿ ಪಡಿಸಿ, ಸದರಿ ಸಾಮಾನ್ಯ ಸಭೆಗೆ ಎಲ್ಲಾ ಗೌರವಾನ್ವಿತ ಸದಸ್ಯರು ಮತ್ತು ಅಧಿಕಾರಿಗಳು ತಪ್ಪದೆ ಸಭೆಗೆ ಹಾಜರಾಗಬೇಕೆಂದು ಕೋರಿದರು. ಸಾಮಾನ್ಯ ಸಭೆಯ ಅಜೆಂಡಾವಾರು ವಿಷಯಗಳಿಗೆ ಸಂಬಂಧಿಸಿದ ಪೂರ್ಣ/ಅಗತ್ಯ ಮಾಹಿತಿಗಳನ್ನು ಐದು ಪ್ರತಿಗಳಲ್ಲಿ ದಿನಾಂಕ 21-02-2015ರೊಳಗೆ ಜಿಲ್ಲಾ ಪಂಚಾಯತ್ ಸಭಾಶಾಖೆಗೆ ಸಲ್ಲಿಸುವಂತೆ ತಿಳಿಸಿದರು. ಹಾಗೂ ದಿನಾಂಕ 31-12-2014 ರ ಸಾಮಾನ್ಯ ಸಭೆಯ ನಡವಳಿಯ ಅನುಪಾಲನಾ ವರದಿಯನ್ನು ಸಂಬಂಧ ಪಟ್ಟ ಅಧಿಕಾರಿಗಳು ದಿನಾಂಕ 31-01-2015 ರೊಳಗೆ ಕಡ್ಡಾಯವಾಗಿ ಕಳುಹಿಸುವಂತೆ ಸೂಚಿಸಲಾಯಿತು.**

ಮುಂದುವರೆದು ಮುಂದಿನ ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯನ್ನು ಜನವರಿ 15ರ ವೇಳೆಗೆ ಕರೆಯುವಂತೆ ಮಾನ್ಯ ಸದಸ್ಯರಾದ ಶ್ರೀ ಟಿ.ಹೆಚ್. ಕೃಷ್ಣಪ್ಪ ರವರು ಅಧ್ಯಕ್ಷರನ್ನು ಕೋರಿದರು. ಮಾನ್ಯ ಅಧ್ಯಕ್ಷರು ಈಗಾಗಲೇ ದಿನಾಂಕ: 02-03-2015 ಕ್ಕೆ ಸಾಮಾನ್ಯ ಸಭೆಯನ್ನು ನಿಗದಿ ಪಡಿಸಿರುವುದರಿಂದ ಸಾಧ್ಯವಿಲ್ಲ ಎಂದು ತಿಳಿಸಿ, ಕೆ.ಡಿ.ಪಿ. ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸಬಹುದೆಂದು ತಿಳಿಸಿದರು.

ಚರ್ಚಿಸತಕ್ಕ ವಿಷಯಗಳು ಮುಕ್ತಾಯಗೊಂಡ ಕಾರಣ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು,
ಜಿಲ್ಲಾ ಪಂಚಾಯತ್,
ತುಮಕೂರು.